ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳು ಸಮಯಕ್ಕೆ ಸರಿಯಾಗಿ ಬಂದೇ ಬರುತ್ತಾರೆ. ಮಾನ್ಯ ಸದಸ್ಯರಿಗೆ ತೊಂದರೆಯಾಗುವುದಾದರೆ ಸರ್ಕಾರದ ಪರವಾಗಿ ಉತ್ತರ ಕೊಡುತ್ತೇವೆ.

FINANCIAL BUSINESS

Dicussion on the Voting of Demands for grants 1980-81

Demand No's 48, 49, 50, 51, 52, 1, 3 (contd)

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).— ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಬೇಡಿಕೆಗಳ ಮೇಲೆ ನಮ್ಮ ಅನಿಸಿಕೆಗಳನ್ನು ಹೇಳಿಕೊಳ್ಳುವುದಕ್ಕೆ ನಾನು ನಿಂತಿದ್ದೇನೆ. ಈ ಕಂದಾಯ ಇಲಾಖೆಯ ಕಾರ್ಯಕ್ರಮಗಳು ಹೇಗಿವೆ ಎಂದರೆ ಶ್ರೀಮಾನ್ ಬಂಗಾರಪ್ಪನವರಂತೇ. ಇದೆ. ಅವರ ಅರ್ಥ ಅವರು ಕಂದಾಯ ಸಚಿವರು. Bangarappa is capitalist by name, socialist by conviction and communist by action. ಅವರೇ ಕಂದಾಯ ಇಲಾಖೆಯ ಬಗ್ಗೆ ಕೊಟ್ಟಿರ ತಕ್ಕಂತಹ ಕೆಲವು ಅಂಶಗಳ ಆಧಾರದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ. ಈ ಮಾತನ್ನು ಹೇಳುವಾಗ ನಮ್ಮ ಕಂದಾಯ ಇಲಾಖೆ ವರದಿಯ ಮುಖ ಕನ್ನಡಿಯಲ್ಲಿ ಎದ್ದು ಕಾಣುತಕ್ಕಂತಹ ಅಂಶವೇನೆಂದರೆ ನೀವು ಸಾಧಿಸಿರತಕ್ಕಂತ ಭೂಸುಧಾರಣೆಯ ಅಂಶವೇ ಇದರಲ್ಲಿ ಹೆಚ್ಚಾಗಿ ಎದು ಕಾಣುತ್ತಿರತಕ್ಕಂತಹ ಅಂಶವಾಗಿದೆ. ನೂರಾರು ವರ್ಷಗಳಿಂದ ಸಾಧಿಸಿದ ಪ್ರಗತಿ ಏನೆಂದರೆ ೧೨ ಲಕ್ಷ ೫೩ ಸಾವಿರ ಎಕರೆ ಜಮೀನನ್ನು ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆ ಕೊಡುವುದರೊಳಗೆ ಈ ಇಲಾಖೆಯ ಇಡೀ ಸಾಧನೆಯೆಲ್ಲಾ ಮುಗಿದು ಹೋಗಿದೆ ಎಂದರೆ ಇದು ಸಂತೋಷಕರವಾದ ವಿಷಯವೆಂದು ನನಗನ್ನಿಸುವುದಿಲ್ಲ. ಭೂಸುಧಾರಣೆ ಕಾಯಿದೆ ರೀತ್ಯ ಒಬ್ಬರ ಜಮೀನನ್ನು ಕಿತ್ತು ಇನ್ನೊಬ್ಬರಿಗೆ ಕೊಡುವುದರಲ್ಲೇ ಇಡೀ ಇಲಾಖೆಯ ವ್ಯವಹಾರ, ಇದು ಮಹತ್ತರವಾದ ಸಾಧನೆ ಎಂಬುದಾಗಿ ಹೇಳುತ್ತಿದ್ದೀರಿ ಹಿಂದಿನ ಕಂದಾಯ ಸಚಿವರು ಒಂದು ಮಾತನ್ನು ಹೇಳಿದರು. ಈ ದೇಶದಲ್ಲಿರತಕ್ಕಂತಹ ಜಮೀನಿನ ವ್ಯವಹಾರವನ್ನು ಹೆಳತ್ತಿದ್ದರು. ಕರ್ನಾಟಕ ರಾಜ್ಯದಲ್ಲಿ ಉಳುಮೆಯಲ್ಲಿರುವ ಜಮೀನಂ ೩ ಕೋಟಿ, ೨೨ ಸಾವಿರದ ೭೧೦ ಎಕರೆಗಳು. ಇದರಲ್ಲಿ ವೆಟ್ ಲ್ಯಾಂಡ್ ೩೧ ಲಕ್ಷದ ೭೫ ಸಾವಿರದ ೫೦೮ ಎಕರೆಗಳು. ಇದಕ್ಕೆ ನಾವು ಟ್ಯಾಕ್ಸ್ ಹಾಕಿರುವುದು ೧ ಕೋಟಿ ೨೮ ಲಕ್ಷದ ೩೦ ಸಾವಿರದ ೯೯೭ ರೂಪಾಯಿಗಳು. ಗಾರ್ಡನ್ ಲ್ಯಾಂಡ್ ೨ ಲಕ್ಷ ೮೧ ಸಾವಿರದ ೪೭೭ ಎಕರೆಗಳು ಇದಕ್ಕೆ ನಾವು ಟ್ಯಾಕ್ಸ್ ಹಾಕಿರುವುದು ೨೧ ಲಕ್ಷದ ೨೫ ಸಾವಿರದ ೨೧೮ ರೂಪಾಯಿಗಳು. ಡ್ರೈ ಲ್ಯಾಂಡ್ ೨ ಕೋಟಿ, ೬೫ ಸಾವಿರದ ೭೨೫ ಎಕರೆಗಳು. ಇದಕ್ಕೆ ಕಂದಾಯ ಹಾಕಿರುವುದು ೩ ಕೋಟಿ ೧೬ ಲಕ್ಷದ ೨೬ ಸಾವಿರದ ೫೧೬ ರೂಪಾಯೀಗಳು. ಕಾಫಿ, ಟೀ, ಮತ್ತು ರಬ್ಬರ್ ಪ್ಲಾಂಟೇಷನ್ ಇರುವುದು ೨ ಲಕ್ಷದ ೩೫ ಸಾವಿರದ ಎಕರೆಗಳು ಇದಕ್ಕೆ ಟ್ಯಾಕ್ಸ್ ಹಾಕಿರುವುದು ೧೬ ಲಕ್ಷದ ೮೧ ರೂಪಾಯಿಗಳು. Unauthorised Coffce cultivation ೫೭ ಸಾವಿರದ ೯೭೭ ಎಕರೆ ಮತ್ತು ೨೬ ಗುಂಟೆ. ಇಷ್ಟೊಂದು ಜಮೀನಿನ ವ್ಯವಹಾರ ಈ ದೇಶದಲ್ಲಿದೆ. ಎರಡು ಕೋಟಿಗಿಂತ ಹೆಚ್ಚಿಗೆ ಭೂಮಿ ಇರತಕ್ಕಂತಹ ಈ ದೇಶದಲ್ಲಿ ೧೨ ಲಕ್ಷ ಎಕರೆ ಭೂಮಿಯಲ್ಲಿ ಏನೂ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಏನೂ ಬೆಳೆಯಂದೇ ಇರತಕ್ಕಂತಹ ಭೂಮಿಯಲ್ಲಿ ಉತ್ಪಾದನೆ ಮಾಡತಕ್ಕಂತಹ ಸುಧಾರಣೆಯಾಗಿಲ್ಲ. ಆದರೆ ಒಬ್ಬ ಭೂ ಮಾಲೀಕ ಆಗಿದ್ದನು, ಅದನ್ನು ಕಿತ್ತು ಇನ್ನೊಬ್ಬನನ್ನು ಮಾಲೀಕನನ್ನಾಗಿ ಇಷ್ಟು ದಿವಸದವರೆಗೆ ಮಾಡಿದ್ದೀರಿ. ಹೊಸದಾಗಿ ಇನ್ನೇನನ್ನೂ ಈ ಭೂಸುಧಾರಣೆ ಕಾಯಿದೆ ರೀತ್ಯ ಮಾಡಲಿಲ್ಲ; ಎಂಬುದಾಗಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಭೂಸುಧಾರಣೆ ಮಾಡಿದ್ದರ ಬಗ್ಗೆ ಏನು ಬಹಳಷ್ಟು ಪ್ರಗತಿ ಸಾಧಿಸಿದ್ದೇವೆ ಎಂಬುದಾಗಿ ಹೇಳತಕ್ಕಂತಹ ಮನೋಭಾವದಲ್ಲಿ ತಾವು ಬೆನ್ನು ತಟ್ಟಿಕೊಳ್ಳುತ್ತಿದ್ದೀರಿ. ಆದರೆ ಈ ಭೂಸುಧಾರಣೆ ಕಾನೂನನ್ನು ಮಾಡುವಂತಹ ಕಾಲದಲ್ಲಿ ಕೂಡ ನೆರೆ ರಾಜ್ಯಗಳಲ್ಲಿ ಯಾವ ಆಧಾರದ ಮೇಲೆ ಮಾಡಿದ್ದಾರೆ ಎನ್ನುವುದರ ಕಡೆಗೆ ನೀವು ಹೋಗಬೇಕಾಗಿತ್ತು, ಅದನ್ನು ಮಾಡದೆ ಮಾಡಿರುವುದು ನಿಜವಾಗಿಯೂ ವಿಷಾದನೀಯವಾಗಿರತಕ್ಕಂತಹದ್ದು. ನನ್ನಲ್ಲಿ ಆಂದ್ರಪ್ರದೇಶ ಮತ್ತು ಕೇರಳಾದಲ್ಲಿರ ತಕ್ಕಂತಹ ಭೂಸುಧಾರಣೆಯ ಕಾನೂನಿನ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯಾರೋ ಒಬ್ಬ ರೈತ ಇರಬಹುದು, ಅವನು ಅನಿವಾರ್ಯ ಕಾರಣಗಳಿಂದ ತನ್ನಲ್ಲಿರ

ತಕ್ಕಂತಹ ೨ ಎಕರೆ ಅಥವಾ ೫ ಎಕರೆ ಭೂಮಿಯನ್ನು ಇನ್ನೊಬ್ಬರಿಗೆ ಗುತ್ತಿಗೆಗೆ ಕೊಟ್ಟಿದ್ದಾನೆ. ಆ ಜಮೀನು ಈಗಿನ ಕಾನೂನಿನ ಪ್ರಕಾರ ಯಾರು ಗುತ್ತಿಗೆ ಮಾಡುತ್ತಿದ್ದಾನೋ ಅವನಿಗೇ ಹೋಗಬೇಕು ಎಂದು ನಿಮ್ಮ ಕಾನೂನಿನಲ್ಲಿರತಕ್ಕಂತಹ ಒಂದು ನಿಯಮ. ಆದರೆ ಈ ಕಾನೂನಿನ ಅಡಿಯಲ್ಲಿ ಆತನಿಗೆ ೧೦ ಎಕರೆ ಜಮೀನು ಸ್ವಂತವಾಗಿ ಇರತಕ್ಕಂತಹ ಒಬ್ಬ ರೈತ ೫ ಎಕರೆ ಭೂಮಿಯನ್ನು ಗುತ್ತಿಗೆಗೆ ಇನ್ನೊಬ್ಬರ ಜಮೀನನ್ನು ಗುತ್ತಿಗೆಗೆ ಮಾಡಿದರೆ, ಉಳುವವನಿಗೇ ಭೂಮಿ ಎಂಬ ಈ ಕಾನೂನಿನ ಆಧಾರದ ಮೇಲೆ ಅವನಿಗೆ ತನ್ನಲ್ಲಿರುವ ೧೦ ಎಕರೆ ಜಮೀನಿನ ಜೊತೆಗೆ ಈ ೫ ಎಕರೆ ಸೇರಿ ಅವನು ೧೫ ಎಕರೆ ಜಮೀನೂ ಸೇರಿಕೊಂಡು ಅವನು ಬಂಗಾರಪ್ಪ ಆಗುತ್ತಾನೆ. ಕ್ಯಾಪಿಟಲಿಸ್ಟ್ ಆಗುತ್ತಾನೆ. ತನ್ನಲ್ಲಿ ಇದ್ದಂತಹ ೫ ಎಕರೆ ಭೂಮಿಯನ್ನೂ ಕಳೆದುಕೊಂಡು ಆತ ಬರೀಗೈಯಪ್ಪ ಆಗುತ್ತಾನೆ. ಇದನ್ನು ಸರ್ಕಾರ ಆಲೋಚನೆ ಮಾಡತಕ್ಕಂತಹ ಪರಿಸ್ಥಿತಿಯಲ್ಲಿಲ್ಲ. ಆದರೆ ಉಳುವವನಿಗೆ ಭೂಮಿಯನ್ನು ಕೊಡಬೇಕು ಎನ್ನುವಂತಹ ಸಿದ್ಧಾಂತದ ಆಧಾರದ ಮೇಲೆ ಭೂಮಿಯನ್ನು ಹಂಚುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಆದರೆ ಭೂಮಿಯನ್ನು ಕಳೆದುಕೊಂಡವರ ಬಗ್ಗೆ ಸರ್ಕಾರ ಏನೂ ಆಲೋಚನೆ ಮಾಡಿಯೇ ಇಲ್ಲ. ಇದು ಸಮಾಜವಾದದಲ್ಲಿ ಆಗಬಾರದಾಗಿತ್ತು. ಭೂಮಿಯನ್ನು ಕಳೆದುಕೊಂಡವನೂ ಮನುಷ್ಯ ಈ ದೇಶದಲ್ಲಿ ಭಾರತೀಯನಾಗಿ ಅವನೂ ಬದುಕಬೇಕು ಎನ್ನುವ ಭಾವನೆಯಿಂದ ಅವನಿಗೆ ಏನಾ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ? ಭೂಮಿಯನ್ನು ಕಳೆದುಕೊಂಡಿರತಕ್ಕಂತಹವರಿಗೆ ಸೌಲಭ್ಯವನ್ನು ಏಕೆ ಇನ್ನೂ ದೊರಕಿಸಿಕೊಟ್ಟಿಲ್ಲ ? ಅವರಿಗೆ ಪರಿಹಾರವನ್ನು ಕೊಡುವುದು ನಿಯಮ ಇದೆ. ಆ ಪರಿಹಾರವನ್ನು ಕೊಡುವುದರಲ್ಲೇ ನಿಮ್ಮ ಆಳುವ ಪಕ್ಷದವರೇ ೨ ಸಾವಿರ ರೂಪಾಯಿಗಳನ್ನು ಪರಿಹಾರ ಕೊಡಬೇಕೆಂದು ಹೇಳಿದ್ದರು. ಆದರೆ ಆಗಿದ್ದಂತಹ ಸರ್ಕಾರ ಅವನ್ನು ೬೦೦ ರೂ. ಗಳಿಗೆ ಇಳಿಸಿತು. ಈ ೬೦೦ ರೂ ಗಳ ಪರಿಹಾರವನ್ನು ತೆಗೆದುಕೊಂಡು ಆ ಜನ ಯಾವ ರೀತಿ ಬದುಕುವುದಕ್ಕೆ ಸಾಧ್ಯ ? ಜಮೀನು ಕಳೆದುಕೊಂಡವನು ಈ ೬೦೦ ಗಳ ಪರಿಹಾರವನ್ನು ತೆಗೆದುಕೊಂಡು ಹೇಗೆ ಜೀವನ ಮಾಡಬೇಕು ? ಒಂದು ದೃಷ್ಟಿಯಿಂದ ಅವನಿಗೆ ಪರಿಹಾರವನ್ನು ಕೊಡಬೇಕಾದುದು ಇಲ್ಲ. ಅವನಿಗೆ ಪರಿಹಾರವನ್ನು ಕೊಡದೆ ಯಾರ್ಯಾರು ಜಮೀನನ್ನು ಕಳೆದುಕೊಂಡಿದ್ದಾರೆ ಅವರ ಮನೆಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಗುಮಾಸ್ತನ ಕೆಲಸವನ್ನು ಈ ವಿಧಾನ ಸೌಧದಲ್ಲಿ ಕೊಡಿಸಿಬಿಡಿ. ಆಗ ನಿಮ್ಮನ್ನು ಯಾರೂ ಪರಿಹಾರವನ್ನು ಕೇಳುವುದೇ ಇಲ್ಲ ಪರಿಹಾರದ ಅವಶ್ಯಕತೆಯೇ ಇರುವುದಿಲ್ಲ. ಪರಿಹಾರ ಕೊಡುವುದರಲ್ಲಿ ಈ ಸಭೆಗೆ ಗೊತ್ತಾಗದ ರೀತಿಯ ಒಂದು ಮಿಂಚಿನ ವ್ಯವಹಾರ ನಡೆದಿದೆ ಅದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಅಧಿವೇಶನದಲ್ಲಿ ಈ ಒಂದು ತಿದ್ದುಪಡಿಯನ್ನು ಮಾಡುತ್ತೇವೆ. ಏನು ಅನ್ಯಾಯವಾಗಿದೆ ಅದನ್ನು ಪರಿಪಡಿಸುತ್ತೇವೆ ಎಂಬುದನ್ನು ಇದುವರೆಗೂ ಸರಿ ಮಾಡಲಿಲ್ಲ. ಮತ್ತೆ ಈ ಜಮೀನನ್ನು ಕಳೆದುಕೊಂಡವರು ಬಹಳ ದಿವಸಗಳಿಂದ ಏನೂ ಪರಿಹಾರ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಇದನ್ನು ತಡವಾಗಿ ವಿಚಾರ ಮಾಡುವಂತಹ ವ್ಯವಹಾರ ಅಲ್ಲ. ಜಮೀನನ್ನು ಕಳೆದುಕೊಂಡು ಯಾವ ಜೀವನ ಮಾಡಬೇಕು ? ಆತನು ವ್ಯವಸಾಯ ಮಾಡುವುದಕ್ಕೆ ಆಸಕ್ತಿ ಇದ್ದರೆ ಅವನಿಗೆ ಜಮೀನನ್ನು ಕೊಡತಕ್ಕಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಾ ? ಉಳುವವನಿಗೇ ಭೂಮಿ ಕೊಡತಕ್ಕಂತಹದ್ದನ್ನು ಯಾವ ರೀತಿ ಮಾಡಿದ್ದೀರೋ. ಅದೇರೀತಿ ವ್ಯವಸಾಯ ಮಾಡುವುದಕ್ಕೆ ಯಾರಿಗೆ ಆಸಕ್ತಿ ಇದೆಯೋ ಅವನಿಗೆ ಭೂಮಿಯನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಈ ದೇಶದಲ್ಲಿ ಭೂಮಿ it has not become a source of income; it has become a source of wealth. ಇದರಿಂದಾಗಿ ಇವತ್ತು ಅವನ ಸಮಸ್ಯೆ ಉಳಿಯುವುದಿಲ್ಲ, ಸಂಪತ್ತು ಉಳಿದಿಲ್ಲ, ಇದನ್ನು ವಿಚಾರ ಮಾಡಿದ್ದೀರಾ. ಇದರಲ್ಲಿ ನಿಮ್ಮ ತಪ್ಪಲ್ಲ. ಕಾನೂನಿನಲ್ಲಿರತಕ್ಕಂತಹದ್ದೇ ಇದಕ್ಕೆ ದೋಷವಾಗಿದೆ. ನಮ್ಮ ಕಾನೂನು ಇಲ್ಲದಿದ್ದರೆ, ಇಟ್ಟುಕೊಳ್ಳುವಂತಹ ಅವಕಾಶ ಇಲ್ಲದಿದ್ದರೆ ಗುತ್ತಿಗೆಯನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೆ ಅವನು ಹೇಗೆ ಜೀವನ ಮಾಡುವುದು ? ಈ ಒಂದು ಕಾನೂನಿನ ದೋಷಕ್ಕಾಗಿ, ಸರ್ಕಾರದ ದೋಷಕ್ಕಾಗಿ ಬೇಕಾದಷ್ಟು ಬದಲಾವಣೆಗಳು ಆಗಬೇಕು. ಪ್ರಜಾಪ್ರಭುತ್ವದ ತತ್ವದ ಆಧಾರದ ಮೇಲೆ ಈ ಶಾಸನ ಇಲ್ಲ ಎನ್ನುವುದರ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ದೇಶದಲ್ಲಿರತಕ್ಕಂತಹ ಅಪ್ಪರ್ ಕೃಷ್ಣ ಪ್ರಾಜೆಕ್ಟ್, ಹಾರಂಗಿ, ಕಬಿನಿ ಯೋಜನೆಗಳಲ್ಲಿ ನಿಮ್ಮ ಭೂಮಿಯನ್ನು ಯಾರೂ ಕೇಳುವುದಕ್ಕೆ ಬರುವುದಿಲ್ಲ. ಇವತ್ತು ತುಂಗಭದ್ರಾ ಆಚ್ಚುಕಟ್ಟಿನಲ್ಲಿ ಎಲ್ಲ ಭೂಮಿಯನ್ನೂ ಆಂಧ್ರಪ್ರದೇಶದವರು ತೆಗೆದುಕೊಂಡಿದ್ದಾರೆ ಕರ್ನಾಟಕದಲ್ಲಿರತಕ್ಕಂತಹ ಜನ ತಮ್ಮ ಜಮೀನನ್ನು ಮಾಡಿಕೊಂಡು ಜೀವನ ಮಾಡುವ ಪರಿಸ್ಥಿತಿಯಲ್ಲಿದ್ದಾರೆ. ಆದೇರೀತಿ ಇವತ್ತು ಕಬಿನಿ ಹಾಗೂ ಭದ್ರಾ ಪ್ರಾಜೆಕ್ಟ್‌ನಲ್ಲಿ ಇರತಕ್ಕಂತಹ ಜಮೀನನ್ನು ಎಲ್ಲಾ ತಮಿಳುನಾಡಿನ ಜನರಿಗೆ ಸೇರ

ತಕ್ಕಂತಹದ್ದನ್ನು ನಾವು ನೋಡುತ್ತಿದ್ದೇವೆ. ಕಬಿನಿ ಪ್ರಾಜೆಕ್ಟ್‌ನಲ್ಲೂ ಕೂಡ ಜಮೀನುಗಳಿಗಾಗಿ ಜನರಿಗೆ ಅಕ್ರಮವಾಗಿ ನಮ್ಮ ಜನ ತಮ್ಮ ಜಮೀನನ್ನು ಮಾರಿಕೊಳ್ಳುತ್ತಿದ್ದಾರೆ. ಕನ್ನಡದ ಜನ ತಮ್ಮ ಭೂಮಿಯನ್ನು ಮಾರತಕ್ಕಂತಹ ಪರಿಸ್ಥಿತಿಯಲ್ಲಿದ್ದಾರೆ. ಇದನ್ನು ತಾವು ಮನಗಂಡಿದ್ದೀ ಆದರೆ ಈ ರೀತಿಯ ಶಾಸನವನ್ನು ಮಾಡುವಂತಹ ಪರಿಸ್ಥಿತಿ ಕಡೆಗೆ ಹೋಗುತ್ತಿರಲಿಲ್ಲ. ಏಕೆಂದರೆ ಭೂಮಿಯ ಬೆಲೆ ಏನಾಗಿದೆ ಎಂದರೆ, ನಾಲಾ ಬೈಲಿನ ಭೂಮಿಯ ಬೆಲೆ ಬಹಳ ಜಾಸ್ತಿಯಾಗಿದೆ.

9-30 ಎ. ಎಂ.

೫ ಎಕರೆಯ ಒಳ್ಳೆಯ ಭೂಮಿಯನ್ನು ಕೊಡುತ್ತೇವೆ ಒಬ್ಬ ಸಬ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಕೊಡಿ. ೧೦ ಎಕರೆ ಭೂಮಿಗೆ ಒಬ್ಬ ಸೇಲ್ಸ್ ಟ್ಯಾಕ್ಸ್ ಅಧಿಕಾರಿಯ ಹುದ್ದೆಯನ್ನು ಕೊಡಿ. ೧೦೦ ಎಕರೆ ಭೂಮಿಗೆ ಒಬ್ಬ ಮುನ್ಸಿಫಂತ್ರಿ ಹುದ್ದೆ ಕೊಡಿ ಎನ್ನತಕ್ಕ ಕಾಲ ಬಂದಿದೆ. ಈಗ ಭೂಮಿಯ ಒಂದು ಬೆಲೆಯನ್ನು ಹುದ್ದೆಗಳ ರೂಪದಲ್ಲಿ ಆಳೆಯತಕ್ಕಂತಹ ಕಾಲ ಬಂದಿದೆ. ಒಬ್ಬ ಸಬ್‌ಇನ್ಸ್‌ಪೆಕ್ಟರ್ ಹುದ್ದೆ ೫ ಎಕರೆ ಜಮೀನಿಗೆ ಸಮವಾಗಿದೆ. ೧೦ ಎಕರೆ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗೆ ಸಮ. ಈ ರೀತಿ ರೈತರು ಜಮೀನನ್ನು ಬಿಟ್ಟು ಕೊಟ್ಟು ನೌಕರಿ ಮಾಡಲು ತಯಾರಾಗಿದ್ದಾರೆ. ಬೆಂಗಳೂರು ಹಾಗೂ ಮೈಸೂರು ನಗರ ಪ್ರದೇಶದಲ್ಲಿ ಸ್ಲಮ್ ಏರಿಯಾಗಳು ನಿರ್ಮಾಣವಾಗುತ್ತಿದೆ. ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ ದಯವಿಟ್ಟು ಒಂದು ಕಾನೂನನ್ನು ಮಾಡುವಾಗ ಇನ್ನೊಬ್ಬನ ಸ್ವಾರ್ಥ ಇರಬಾರದೆಂದು ಹೇಳುತ್ತೇನೆ. ಕೇರಳ ರಾಜ್ಯದಲ್ಲಿ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ಮಾಡಿದ್ದಾರೆ. ತಾವು ಈ ಬಗ್ಗೆ ಏನು ಸಾಧನೆ ಮಾಡಿದ್ದೀರಿ ಹೇಳಿ? ತಾವು ಉಳುವವನಿಗೇ ಭೂಮಿ ಎಂದು ಮಾಡಿದ್ದೀರಿ. ಅವನಲ್ಲಿ ಎಷ್ಟು ಸ್ವಂತ ಭೂಮಿ ಇದ್ದರೂ ಗುತ್ತಿಗೆ ಮಾಡುತ್ತಿರುವುದು ಅವನಿಗೇ ಎಂದು ಮಾಡಿದ್ದೀರಿ. ಆದರೆ ಕೇರಳದಲ್ಲಿ ಒಬ್ಬ ೧೦ ಎಕರೆ ಸ್ವಂತ ಜಮೀನು ಹೊಂದಿದ್ದು ಎರಡೂವರೆ ಎಕರೆ ಭೂಮಿಯನ್ನು ಬೇರೆಯವರದ್ದನ್ನು ಗುತ್ತಿಗೆ ಮಾಡುತ್ತಿದ್ದರೆ ಅದು ಆತನಿಗೆ ಸೇರುವುದಿಲ್ಲ. ಯಾರು ಭೂಮಿ ಇಲ್ಲದೇ ಇರುತ್ತಾರೋ ಅವರಿಗೆ ಆ ಜಮೀನು ಸೇರುತ್ತದೆ. ನಮ್ಮಲ್ಲಿ ಹಾವನ್ನು ಹೊಡೆದು ಹದ್ದಿಗೆ ಹಾಕಿದಂತಹ ಕಾನೂನನ್ನು ಮಾಡಿದ್ದೀರಿ. ಒಬ್ಬನ ತಲೆಯನ್ನು ಹೊಡೆದು ಇನ್ನೊಬ್ಬನನ್ನು ಶ್ರೀಮಂತನನ್ನಾಗಿ ಮಾಡತಕ್ಕ ಮನೋವೃತ್ತಿ ಇದಯೇ? ಹೊರತು, ಆತ ಬದುಕಲು ವ್ಯವಸ್ಥೆ ಮಾಡತಕ್ಕ ಅವಕಾಶವನ್ನು ಮಾಡಿಕೊಟ್ಟಿಲ್ಲ. ಕೇರಳ ಲ್ಯಾಂಡ್ ರಿಫಾರ್ಮ್ ಆಕ್ಟ್‌ನಲ್ಲಿ ಈ ಬಗ್ಗೆ ಹೇಳಿದ್ದಾರೆ. ಅಲ್ಲಿನ ಕೇರಳ ಲ್ಯಾಂಡ್‌ರಿಫಾರ್ಮ್ ಆ್ಯಕ್ಟಿನ ಸೆಕ್ಷನ್ ೫೫ ಏನು ಹೇಳುತ್ತದೆಂದರೆ,

> Section 16 of the Kerala Land Reforms Act, says thus: "The price Payable by the cultivating tenant for the purchase of the right, title and interest of the land owner and the intermediaries, if any, shall be the aggregate of–
>
> (1) Sixteen times the fair rent in respect of the holding or part thereof to which the purchase relates;"

ಎಂದು ಇದೆ. ಆದರೆ ನೀವು ಏನು ಹೇಳುತ್ತೀರಿ? ಎಂದರೆ, ೨೦ ಭಾಗ ರೆವಿನ್ಯೂ ಎಂದು ಮಾಡಿದರೆ ವಾಟರ್ ರೇಟ್ ಏನಿದೆ ಅದನ್ನು ಕಿತ್ತುಹಾಕಿ ಕಂದಾಯ ಏನಿದೆ ಅದರ ೧೦ ರಷ್ಟು ಕೊಡಬೇಕೆಂದು ಮಾಡಿದ್ದೀರಲ್ಲಾ ನೀವು ಯಾವ ಪುರುಷಾರ್ಥವನ್ನು ಸಾಧಿಸುವುದಕ್ಕೆ ಮಾಡಿದ್ದೀರೆಂದು ಕೇಳುತ್ತೇನೆ. ತೋಳ ಕುರಿ ಮರಿಗೆ ನೀರು ಕುಡಿಯುತ್ತಿರುವಾಗ ಹೇಳಿತಂತೆ ನೀನು ನೀರು ಕುಡಿಯ ಬೇಡ ನೀರೆಲ್ಲಾ ನಿನ್ನ ಎಂಜಲಾಗಿಬಿಡುತ್ತದೆ ಆದ್ದರಿಂದ ನಾನು ನೀರನ್ನು ಕುಡಿಯಲಾಗದು ಎಂದು ಹೇಳಿತಂತೆ. ಎಲ್ಲರೂ ಜಮೀನ್ದಾರರಾಗಿದ್ದಾರೆಂದು ಅವರ ತಲೆಯನ್ನು ಹೊಡೆಯತಕ್ಕ ಶಾಸನವನ್ನು ತಾವು ಮಾಡಿದ್ದೀರಿ. ನೀವು ಮಾಡಿರತಕ್ಕ ಕಾನೂನು ನಿಜವಾಗಿಯೂ ಮೆಚ್ಚತಕ್ಕದ್ದಲ್ಲ. ಕೇರಳದಲ್ಲಿ ಏನು ೧೬ ಭಾಗದಷ್ಟು ಎಂದು ಮಾಡಿದ್ದಾರೆ ಅದನ್ನು ನೋಡಿದರೆ ನಮ್ಮಲ್ಲಿ ಮಾಡಿರುವುದನ್ನು ನೋಡಿದರೆ ಬಹಳ ದುಃಖಕರವಾಗುತ್ತದೆ. ಅನಿವಾರ್ಯವಾಗಿ ಈ ಶಾಸನವನ್ನು ಮಾಡಿರುವುದರ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ರೈತರ ಒಂದು ನ್ಯಾಯಕ್ಕಾಗಿ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ತಾವು ಮಾಡಿದ್ದೀರಿ. ಅಲ್ಲಿಯೂ ಕೂಡ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಮಾಡಿದ್ದಾರೆ. Section 99 of the Kerala Land Reforms Act says:

"The Land Tribunal shall consist of a sole Member who shall be a judicial officer of the rank of a Munsiff or an officer not below the rank of Tahsildar, appointed by the Government."

But, here we are governed by bureaucrats.

ಇಲ್ಲಿಯೂ ಮೂರು ಜನರನ್ನು ಲ್ಯಾಂಡ್ ಟ್ರಿಬ್ಯುನಲ್‌ಗೆ ಮಾಡಿದ್ದೀರಿ. ನೀವು ಒಂದು ಎಷ್ಟು ಜನರನ್ನು ರೀಪ್ಯಾಬಿಲಿಟೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಏನೆನ್ನೋ ಒದಗಿಸಿಕೊಡಬೇಕೆಂದು ಒಂದು ರಾಜಕೀಯ ಭಾವನೆಯಿಂದ ಮಾಡಿರುವುದರಿಂದ ಈ ದೇಶದಲ್ಲಿ ಆಗಿರತಕ್ಕ ಅನಾಹುತ ಏನು ಎಂಬುದು ಗೊತ್ತೆ ? ನೀವೇನೋ ಶಾಸನವನ್ನು ಮಾಡಿದ್ದಿರಿ. ಆದರೆ ಈ ಶಾಸನವನ್ನು ಜಾರಿಗೆ ಕೊಡತಕ್ಕವರು ಶಾಸನ ಗೊತ್ತಿಲ್ಲದೇ ಇರತಕ್ಕವರು. ನಿಜವಾಗಿಯೂ ಆಶ್ಚರ್ಯದ ಸಂಗತಿ ಎಂದರೆ ನಾವು ಕಾನೂನಿನ ಸಹಾಯದಿಂದ ಮೇರೆದು ಪ್ರಜಾಪ್ರಭುತ್ವವನ್ನು.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಬಹಳ ಮುಖ್ಯ ವಾದಂತಹ ವಿಷಯವನ್ನು ಎತ್ತಿದ್ದಾರೆ. ಈ ಬಗ್ಗೆ ತಡವಾಗಿ ಉತ್ತರವನ್ನು ಕೊಟ್ಟರೆ ಆದರ ಸತ್ವ ಕಡಿಮೆ ಯಾಗಬಹುದು. ಮತ್ತೊಂದು ರಾಜ್ಯದಲ್ಲಿ ಉದಾಹರಣೆಗೆ ಮುನ್ಸೀಫ್ ಎಂದು ಇಟ್ಟುಕೊಳ್ಳೋಣ. ಅವನು ಒಂದು ತೀರ್ಪುಕೊಡುತ್ತಾನೆ. ಆದರೆ ಪರ ಮತ್ತು ವಿರೋಧವಾಗಿ ವಾದ ವಿವಾದಗಳು ನಡೆಯುತ್ತವೆ. ಆ ತೀರ್ಪನ್ನು ಜಾರಿಗೆ ಕೊಡತಕ್ಕವರೆಲ್ಲರೂ ಕಾನೂನನ್ನು ತಿಳಿದಿರಬೇಕೆಂದೇನಲ್ಲ. ಜಸ್ಟೀಸ್ ಭಗವತ್ ಅವರು ಸರಾ ಲ್ಯಾಂಡ್ ಟ್ರಿಬ್ಯುನಲ್ಸ್‌ನ ಬಗ್ಗೆ ಹೇಳಿದ್ದಾರೆ. ಒಂದು ಕಾನೂನನ್ನು ಒಂದು ಸಮಾಜದಲ್ಲಿ, ಒಂದು ದೇಶದಲ್ಲಿ ಜಾರಿಗೆ ಕೊಡತಕ್ಕ ಕಾನೂನನ್ನು ಮಾಡತಕ್ಕ ಪರಿಣತರು ಎನ್ನತಕ್ಕ ಜನರೇ ನಾವು ಒತ್ತಟ್ಟಿಗಿರೋಣ. ಎಂದರೆ ಶಾಸನ ಸಭೆಯಾಗಲಿ, ಪಾರ್ಲಿಮೆಂಟಾಗಲಿ ಎಂದು ಅರ್ಥ. ಆ ಕಾನೂನನ್ನು ಜಾರಿಗೆ ಕೊಡತಕ್ಕವರೆಲ್ಲರೂ ಕಾನೂನನ್ನು ಓದಿರಬೇಕೆಂದೇನಲ್ಲ. ಕಾನೂನನ್ನು ಜಾರಿಗೆ ತರತಕ್ಕದು ನಮಗೆ ಸೇರಿದ್ದಲ್ಲ. ಅದನ್ನು ಜಾರಿಗೆ ತರಲು ಎಲ್. ಎಲ್. ಬಿ. ಓದಿರಬೇಕೆಂದೇನಲ್ಲ. ಪೆಬ್ಬೆಟ್ಟನ್ನು ಹೊತ್ತುವಂತಹ ಜೋರೇಗೌಡನೂ ಕಾನೂನನ್ನು ಜಾರಿಗೆ ಕೊಡುತ್ತಾನೆ. ಒಂದು ಕೆಪ್ಪ ದೀಪ ಇರುತ್ತದೆ. ಆದರ ಮುಂದೆ ಆತ ನಿಂತು ಮುಂದೆ ಹೋದರೆ ಆಗ ಅವರು ಕಾನೂನನ್ನು ಜಾರಿಗೊಳಿಸಿಂದತಾಗುತ್ತದೆ. ಇದಕ್ಕೆ ಆತ ಲಾ ಓದಬೇಕೆಂದೇನಿಲ್ಲಾ ಇಲ್ಲಿ ಲಾ ಓದುವುದು ಅನಾವಶ್ಯಕ. ಆದ್ದರಿಂದ ಕಾನೂನನ್ನು ಜಾರಿಗೆ ಕೊಡಬೇಕಾದವರೆಲ್ಲಾ ಕಾನೂನನ್ನು ಓದಬೇಕೆಂದೇನಿಲ್ಲ. ನಾನೇನು ಕಾನೂನನ್ನೇ ಓದಬಾರನೆಂದೇನೂ ಹೇಳುವುದಿಲ್ಲ.

ಶ್ರೀ ಎಚ್. ಗಂಗಾಧರಸ್ವಾ—ಕಾನೂನು ಇರತಕ್ಕದ್ದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಎಷ್ಟು ರಿಟ್‌ಗಳು ಪೆಂಡಿಂಗ್ ಇವೆ ಎಂಬುದು ನಿಮಗೆ ಗೊತ್ತೆ ?

ಶ್ರೀ ಎಚ್. ಗಂಗಾಧರಸ್.—ಸುಮಾರು ೧೯ ಸಾವಿರ ಇರಬಹುದೆಂದು ಕೇಳಿದ್ದೇನೆ. ಇದಕ್ಕೆ ನಾನಾ ಕಾರಣಗಳು ಇವೆ.

ಶ್ರೀ ಎಸ್ ಬಂಗಾರಪ್ಪ.—ಎಲ್. ಎಲ್. ಬಿ. ಓದದೇ ಇರತಕ್ಕವರು ಟ್ರಿಬ್ಯುನಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಈಗ ಎಲ್. ಎಲ್. ಬಿ. ಓದಿರತಕ್ಕ ಜನರು ಇರತಕ್ಕಂತಹ ನ್ಯಾಯಾಲಯದಲ್ಲಿ ಎಷ್ಟು ಕೇಸ್‌ಗಳು ಸಿ. ಪಿ. ಸಿ. ಕೆಳಗೆ ಪೆಂಡಿಂಗ್ ಇವೆ ? ಇವಕ್ಕೆ ಕಾರಣ ಏನು ಸ್ವಾಮಿ ? ನಮ್ಮ ಒಂದೇ ಹೈಕೋರ್ಟಿನಲ್ಲಿ ಈ ರೀತಿ ಆಗಿಲ್ಲ. ದೇಶದ ಇತರೇ ಹೈಕೋರ್ಟಿನಲ್ಲಿ ಹಾಗೂ ಸುಪ್ರೀಮ್ ಕೋರ್ಟಿನಲ್ಲಿ ಬೇಕಾದಷ್ಟು ಕೇಸ್‌ಗಳು ಪೆಂಡಿಂಗ್ ಇವೆ. ಇವು ಯಾಕೆ ಗೊತ್ತೆ?

ಶ್ರೀ ಎಚ್. ಗಂಗಾಧರಸ್.—ಇದಕ್ಕೆ ಕಾರಣ ಇದೆ. ನಮ್ಮಲ್ಲಿ ಇನ್ನೂ ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳು ಬಿಟ್ಟು ಹೋದ ಕಾನೂನೇ ಇದೆ. ಇದರಲ್ಲಿ ಒಂದು ಸೇಲ್ ಡೀಡ್‌ಗೆ ೧೨ ಜನ ಸಾಕ್ಷಿಯನ್ನು ಹೇಳಬೇಕಾಗುತ್ತದೆಂದು ಇಟ್ಟುಕೊಳ್ಳೋಣ. ಪಹಣಿ ಬರೆಯತಕ್ಕಂತಹವರು ನಿಷ್ಪಾವಂತರಾಗಿದ್ದರೆ ಈ ಒಂದು ಪ್ರಕರಣ ಕೋರ್ಟ್‌ವರೆಗೆ ಬರುವುದಿಲ್ಲ. ಈ ಬಗ್ಗೆ ತೀರ್ಪು ಕೊಡುವಾಗ ೧೧ ಜನ ಸಾಕ್ಷಿ ಕೊಟ್ಟಾಗ ಒಬ್ಬ ಬೇರೊಂದು ರೀತಿಯ ಸಾಕ್ಷಿ ಕೊಡುತ್ತಾನೆ. ಆಗ ತೀರ್ಪು ಮುಂದೆ ಹೋಗಿ ತಡವಾಗಂತ್ತದೆ. ಈ ರೀತಿ ತೊಡಕುಗಳು ಇರುವುದರಿಂದ ಕೇಸ್‌ಗಳು ಪೆಂಡಿಂಗ್ ಉಳಿಯುತ್ತವೆ ರಾಜಶೇಖರ ವಿಲಾಸದಲ್ಲಿ

ಶಡಕ್ಷರಿಯ ವಿಷಯವನ್ನು ತಾವು ಓದಿರಬಹುದು. ಅಲ್ಲಿ ರಾಜ ತನ್ನ ಮಗನು ಒಬ್ಬ ಭಿಕ್ಷುಕಿಯ ಮಗನ ಮೇಲೆ ಕುದುರೆಯನ್ನು ಓಡಿಸಿ ಆತನ ಸಾವಿಗೆ ಕಾರಣನಾದ್ದರಿಂದ ಆತ ತನ್ನ ಮಗನಿಗೇ ಶಿರವನ್ನು ಕಡೆದುಹಾಕುವಂತಹ ಆಜ್ಞೆಯನ್ನು ಮಾಡಿದನು. ಆ ರೀತಿಯ ಒಂದು ಕಾನೂನು ಬರಬೇಕು. ತನ್ನವರೆಂದು ನೋಡಬಾರದು. ಈ ರೀತಿ ಎಲ್ಲ ಇದ್ದರೆ ಯಾವ ಕಾನೂನು ಬೇಕಾಗಿರಲಿಲ್ಲ. ಅಂತಹ ಜನರಲ್ಲ. ಜನರು ನಿಮ್ಮನ್ನು ಸ್ಥಾನಮಾನಗಳನ್ನು ಕೊಡಿ ಎಂದು ಕೇಳಲಿಲ್ಲ. ನೀವು ಏನು ಹೇಳಿದಿರಿ, ನೀವು ಕೊಟ್ಟ ಹೇಳಿಕೆಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ದೇಶದ ಭವಿಷ್ಯವನ್ನು ನಿಮ್ಮ ಕೈಯಲ್ಲಿ ಜನರೇ ಕೊಟ್ಟಿರುತ್ತಾರೆ. ಜನರು ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟದ್ದಕ್ಕೆ ನೀವು ಮಾಡಿದ್ದಾದರೂ ಏನು ಎಂದು ಕೇಳಬೇಕಾಗಿದೆ. ಒಂದು ಸಾಮಾನ್ಯ ವಿಷಯ, ನ್ಯಾಯ ಮಂಡಳಿಗೆ ನೇಮಕಾತಿ ಮಾಡುವ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮಾನ್ಯ ಕಂದಾಯ ಸಚಿವರಿಗೂ ಭಿನ್ನಾಭಿಪ್ರಾಯವಿರುವ ವಿಷಯ ಪತ್ರಿಕೆಗಳಲ್ಲಿಯೂ ಬಂದಿರುತ್ತದೆ. ಇದು ಆಗಬಾರದು. ಮಂತ್ರಿಮಂಡಲದ ರಚನೆ ಮಾಡುವುದರೊಳಗೇನೇ ಭಿನ್ನಾಭಿಪ್ರಾಯವೆಂದಲೇ ರಚಿಸಲಾಗಿರುತ್ತದೆ. ಇಂಥ ಭಿನ್ನಾಭಿಪ್ರಾಯದ ಆಧಾರದಮೇಲೆ ಕಟ್ಟಿರ ತಕ್ಕಂಥ ನ್ಯಾಯ ಮಂಡಲಿಗಳು ದೇಶದಲ್ಲಿ ನ್ಯಾಯವನ್ನು ಎಷ್ಟರಮಟ್ಟಿಗೆ ದೊರಕಿಸಿಕೊಡುತ್ತವೆಂಬುದನ್ನು ಗಮನಿಸಿದರೆ ನಿಜವಾಗಿಯೂ ಯಾವುದೇ ನ್ಯಾಯ ಮಂಡಲಿಗಳಿಂದ ಸರಿಯಾದ ನ್ಯಾಯ ಸಿಕ್ಕತಕ್ಕಂತ ಸಂದರ್ಭಗಳಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಜಾರಿಗೆ ತಂದು ಇದರಿಂದ ಯಾರು ಒಂದು ಏಕರೆ ಅರ್ಧ ಏಕರೆ ಭೂಮಿಯನ್ನು ಇಟ್ಟುಕೊಂಡಿದ್ದರೋ, ಅವರು ಭೂಮಿಯನ್ನು ಕಳೆದುಕೊಂಡಿರುತ್ತಾರೆ. ಅವರಿಗೆ ಕಾಂಪನ್ಸೇಷನ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿರುತ್ತೀರಿ. ಆದರೆ ಅದನ್ನು ಇಲ್ಲಿಯವರೆಗೂ ಮಾಡಲಿಲ್ಲ. ಈ ರೀತಿಯಾದ ಒಂದು ತಿದ್ದುಪಡಿಯನ್ನು ತಂದು ತಿದ್ದುಪಡಿ ತಂದ ದಿವಸದಿಂದಲೂ ದೋಷ ಪೂರ್ಣವಾಗಿಯೇ ಇಟ್ಟುಕೊಂಡಿದ್ದೀರಿ. ಆಂಧ್ರ ಕೇರಳದಂಥ ನೆರೆರಾಜ್ಯಗಳಲ್ಲಿ ಅರ್ಧಭೂಮಿ ಗೇಣಿದಾರನಿಗೆ ಪರಿಹಾರವಾಗಿಯೂ ಇನ್ನು ಅರ್ಧಭಾಗ ಮಾಲೀಕನು ಇಟ್ಟುಕೊಳ್ಳತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿರುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಆರೀತಿಯಾದ ವ್ಯವಸ್ಥೆಯನ್ನು ಮಾಡಲಿಲ್ಲ. ಒಬ್ಬನ ಭೂಮಿಯನ್ನು ಕಿತ್ತು ಮತ್ತೊಬ್ಬನಿಗೆ ಕೊಟ್ಟು ಅವನ ಕುಟುಂಬವನ್ನು ಸದೆಬಡಿದು ಇನ್ನೊಬ್ಬನ ಕುಟುಂಬವನ್ನು ರಕ್ಷಣೆ ಮಾಡತಕ್ಕಂಥ ಮನೋಭಾವ ಏನು ಇರುತ್ತದೆ ಇದು ಒಂದುರೀತಿಯಾದ ಕ್ಯಾಪಿಟಾಲಿಸಮ್ ಆಗಿರುತ್ತದೆ. ಆದ್ದರಿಂದ ಈ ಶಾಸನಕ್ಕೆ ಒಂದು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ರೆವಿನ್ಯೂ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಏಳು ಕೋಟಿ ರೂಪಾಯಿ ರೆವಿನ್ಯೂ ವಸೂಲು ಮಾಡುವುದಕ್ಕಾಗಿ ಹತ್ತೊವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುತ್ತಾರೆ, ಇದರಿಂದ ಏನೂ ಲಾಭ ಬರುತ್ತಿಲ್ಲ. ಇದನ್ನು ರದ್ದು ಮಾಡಿ ಪರ್ಯಾಯವಾಗಿ ಬೇರೆ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದೆಂದು ಹೇಳುತ್ತೇನೆ. ಇಂದು ವ್ಯವಸಾಯದ ಪೆಚ್ಚವನ್ನು ಕಡಿಮೆ ಮಾಡಬೇಕಾಗಿರುತ್ತದೆ. ಈ ಪೆಚ್ಚವನ್ನು ಕಡಿಮೆ ಮಾಡಬೇಕೆಂದು ನಾವು ಮೊದಲಿನಿಂದಲೂ ಹೇಳುತ್ತಲೇ ಬಂದಿರುತ್ತೇವೆ. ಈವತ್ತಿಗೂ ಅದೇ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದೀರಿ. ದೇಶದಲ್ಲಿ ಒಬ್ಬ ರೈತನ ಅರ್ಜಿ ಇತ್ಯರ್ಥವಾಗಬೇಕಾದರೆ ಎಷ್ಟು ಕಚೇರಿಗಳನ್ನು ಸುತ್ತಾಡಬೇಕಾಗಿದೆ ಎಂದರೆ ತಹಸೀಲ್ದಾರಿಂದ ಹಿಡಿದು ಡೆಪ್ಯುಟಿ ಕಮಿಷನರ್, ಅಸ್ಟೆಂಟ್ ಕಮಿಷನರ್, ಅನಂತರ ರೆವಿನ್ಯೂ ಕಮಿಷನರ್, ಇಷ್ಟು ಜನರು ಅರ್ಜಿಯನ್ನು ನೋಡಬೇಕಾಗಿರುತ್ತದೆ. ಏತಕ್ಕೆ ಇಷ್ಟೊಂದು ಕಚೇರಿಗಳನ್ನು ನಿರ್ಮಾಣಮಾಡಿ ದೇಶದ ದುಡ್ಡನ್ನು ಖರ್ಚು ಮಾಡಬೇಕೆಂದು ಕೇಳುತ್ತೇನೆ. ಅನಾವಶ್ಯಕವಾಗಿ ಇರತಕ್ಕಂಥ ಕಚೇರಿಗಳನ್ನು ಏತಕ್ಕೆ ರದ್ದುಗೊಳಿಸಬಾರದು. ಸಾವಿರಾರು ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಿರುವ ಐ. ಎ. ಎಸ್. ಅಧಿಕಾರಿಗಳು ಇಲ್ಲಿಯವರೆಗೂ ಎಷ್ಟು ಮೊಕದಮ್ಮೆಗಳನ್ನು ಇತ್ಯರ್ಥಮಾಡಿರುತ್ತಾರೆ. ಈವತ್ತಿಗೂ ಸೈಕೋರ್ಟಿನಲ್ಲಿರತಕ್ಕಂಥ ಮೊಕದಮೆಗಳು ೧೦-೧೨ ವರ್ಷಗಳಿಂದ ಇತ್ಯರ್ಥವಾಗಿದೆ ಹಾಗೆಯೇ ಉಳಿದಿರುತ್ತವೆ, ಅಪಿಲಿಯೇಟ್ ಟ್ರಿಬ್ಯುನಲ್‌ಗಳಲ್ಲಿ ಹಾಗೆಯೇ ಎಷ್ಟೋ ಮೊಕದಮೆಗಳು ಇತ್ಯರ್ಥವಾಗದೆ ಉಳಿದಿರುತ್ತವೆ. ಮಾನ್ಯ ಬಸವಲಿಂಗಪ್ಪನವರು ಅಧಿಕಾರದಲ್ಲಿದ್ದಾಗ್ಗೆ ಜಮಾಬಂದಿ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಅಲ್ಲಿ ತೀರ್ಮಾನ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಜನತಾ ಸರ್ಕಾರ ಇದ್ದಾಗ ಹೇಳಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಜಮಾಬಂದಿ ಪದ್ಧತಿಯನ್ನು ತರುತ್ತೇವೆಂದು ಹೇಳಿ ಆರುತಿಂಗಳಾಯಿತು. ಅದು ಮರೆತೇ ಬಿಟ್ಟಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್ ಬಂಗಾರಪ್ಪ.—ಮೇರೆತಿಲ್ಲ.

ಶ್ರೀ ಎಚ್. ಗಂಗಾಧರನ್.—ಮೇರೆತೂ ಇಲ್ಲ. ಜಮಾನೂ ಆಗಿಲ್ಲ, ಬಂದಿಯೂ ಆಗಿಲ್ಲ. ರಾಜಸ್ಥಾನದಲ್ಲಿ ಈ ಪದ್ಧತಿಯನ್ನು ಜಾರಿಗೆ ತಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿದೆ ರೈತ ಡೆಪ್ಯೂಟಿ ಕಮಿಷನರಿಗೆ ಒಂದು ಅರ್ಜಿಯನ್ನು ಸಲ್ಲಿಸಿದರೆ ಸಂಜೆಯೊಳಗೆ ಇತ್ಯರ್ಥಮಾಡಿಕೊಡುವಂತ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೆ. ರೈತನು ಮುಂದೆ ಹೋಗತಕ್ಕಂಥ ಪರಿಸ್ಥಿತಿಯೇ ಇಲ್ಲ. ಈ ರೀತಿಯಾಗಿ ಒಂದೇ ವರ್ಷದೊಳಗೆ ಎರಡುಲಕ್ಷ ರೈತರ ವಿವಾದಗಳನ್ನು ತೀರ್ಮಾನ ಮಾಡಿರುತ್ತಾರೆ. ನಮ್ಮ ರಾಜ್ಯದಲ್ಲಿ ಈವತ್ತು ಏನು ನಡೆಯುತ್ತಿದೆ ಎಂದರೆ ರೈತ ಒಂದು ಆರ್ ಸಿ.ಸಿ. ಕಾಪಿಯನ್ನು ಪಹಣಿಯನ್ನು ತೆಗೆದು ಕೊಳ್ಳಬೇಕೆಂದರೆ ಬಹಳ ಕಷ್ಟಕರವಾದ ಪರಿಸ್ಥಿತಿಯಾಗಿರುತ್ತದೆ. ನ್ಯಾಯವಾದ ಬೇಡಿಕೆ ರೈತನ ಮನೆ ಮುಂದೆ ಹೋಗತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ಕಷ್ಟವೇನಲ್ಲ. ಜಿಲ್ಲಾಧಿಕಾರಿಗಳು ಆಯಾ ಕ್ಷೇತ್ರಗಳಿಗೆ ಹೋಗಿ ಅಲ್ಲಿಯ ಜನರ ಸಮಸ್ಯೆಯನ್ನು ತಿಳಿದು, ಅಲ್ಲಿಯೇ ಬಗೆಹರಿಸತಕ್ಕಂಥ ವ್ಯವಸ್ಥೆಯನ್ನು ರಾಜಸ್ಥಾನದಲ್ಲಿ ಮಾಡಿದ್ದಾರೆ. ಅದೇರೀತಿಯಾಗಿ ಇಲ್ಲಿಯೂ ಒಂದು ಬದಲಾವಣೆಯನ್ನು ಮಾಡಬೇಕು. ಅವಶ್ಯಕ ಕಂಡುಬಂದಲ್ಲಿ ಮಂತ್ರಿಗಳ ಸಮುಖದಲ್ಲಿಯೇ ವಿವಾದಗಳನ್ನು ತೀರ್ಮಾನ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿರುತ್ತಾರೆ. ಇಷ್ಟು ಮಾಡಿದರೆ ನಮ್ಮ ಸರ್ಕಾರದವರು ರೆವಿನ್ಯೂ ಬಾಬಿನಲ್ಲಿ ಎಷ್ಟೋ ಹಣವನ್ನು ಸಂಪಾದನೆ ಮಾಡಬಹುದು. ಆಲ್ಲದೆ ಜನರ ಮೇಲೆ ಅನಾವಶ್ಯಕವಾಗಿ ಹಾಕತಕ್ಕಂಥ ಹೊರೆಯನ್ನು ತಪ್ಪಿಸಲೂ ಸಾಧ್ಯವಾಗುತ್ತದೆ. ಇನ್ನು ದೇಶದಲ್ಲಿ ಬಹಳಷ್ಟು ಗಮನವನ್ನು ಕೊಡದೆ ಇರತಕ್ಕಂಥ ಅಂಶ ಎಂದರೆ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಎಂದು ಏನು ಇದೆ ಇದು ೧೯೫೬ನೇ ಇಸವಿಯಲ್ಲಿ ಏಕೀಕರಣವಾದಾಗ ಮದ್ರಾಸ್ ಬಾಗದಿಂದ, ಬಾಂಜೆ ಹೈದರಾಬಾದ್ ಮೈಸೂರು ಎಂದು ಬೇರೆ ಬೇರೆ ಬಾಗಳಿಂದ ಬಂದಂಥ ಶಾಸನಗಳು ಇರುತ್ತವೆ. ಇವೆಲ್ಲವನ್ನು ಸೇರಿಸಿ ಒಂದು ಯೂನಿಫಾರಮ್ ಲಾ ಮಾಡಲಿಕ್ಕೆ ಇನ್ನೂ ಕೂಡ ಸಾಧ್ಯವಾಗಿಲ್ಲ. ನಮ್ಮ ದೇಶದ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ತಕ್ಕ ವ್ಯವಸ್ಥೆಯನ್ನು ಇದುವರೆಗೂ ಮಾಡಲಿಲ್ಲ. ಆದರೆ ಬೇರೆ ಧರ್ಮಗಳನ್ನು ಉಳಿಸುವುದಕ್ಕೆ ನಮ್ಮ ಸರ್ಕಾರದವರು ಬಹಳಷ್ಟು ಖರ್ಚು ಮಾಡುತ್ತಿರುತ್ತಾರೆ. ನಮ್ಮ ದೇಶದಲ್ಲಿ ಜಗತ್ಪ್ರಸಿದ್ಧವಾದ ಸಂಸ್ಥೆಗಳು ಇವೆ. ಇವೆಲ್ಲವೂ ಹಾಳಾಗತಕ್ಕಂಥ ಪರಿಸ್ಥಿತಿಯನ್ನು ನಾವು ಇಂದು ನೋಡುತ್ತಿದ್ದೇವೆ. ಹಳೇಬೀಡು, ಬೇಲೂರು ಜಗತ್ಪ್ರಸಿದ್ಧವಾದ ದೇವಸ್ಥಾನಗಳು. ಈ ದೇವಸ್ಥಾನಗಳನ್ನು ಉದ್ಧಾರಮಾಡತಕ್ಕಂಥ ಕಾರ್ಯವನ್ನು ಮಾಡಲಿಲ್ಲ. ಇತಿಹಾಸಪ್ರಸಿದ್ಧವಾದ ಕ್ಷೇತ್ರಗಳಲ್ಲಿರತಕ್ಕಂಥ ದೇವಸ್ಥಾನಗಲ್ಲಿ ದೇವರೇ ಇಲ್ಲದಂಥ ಪರಿಸ್ಥಿತಿ ಇರುತ್ತದೆ. ದೇವರನ್ನೇ ಕದ್ದುಕೊಂಡು ಹೋಗುತ್ತಿರುತ್ತಾರೆ. ಲಕ್ಷಾಂತರ ರೂಪಾಯಿಗಳಿಗೆ ಪರದೇಶಗಳಲ್ಲಿ ಮಾರಾಟ ಮಾಡಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ತಕ್ಕ ಬಂದೋಬಸ್ತು ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಇವತ್ತು ಇತಿಹಾಸ ಪ್ರಸಿದ್ಧ ಸ್ಥಳವಾದ ಮೈಸೂರು ಜಿಲ್ಲೆಯಲ್ಲಿರುವ ಸೋಮನಾಥಪುರದಲ್ಲಿ ದೇವರೇ ಇಲ್ಲ. ಅಲ್ಲಿದ್ದ ದೇವರನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆ. ದೇವರನ್ನು ಕದಿಯುವವರಿಗೆ ನೀವು ಸಪೋರ್ಟ್ ಮಾಡುತ್ತಿದ್ದೀರಿ. ಲಕ್ಷಾಂತರ ರೂಪಾಯಿಗಳ ಲೂಟಿಯಾಗುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಇದನ್ನು ತಡೆಹಿಡಿಯುವ ಯಾವ ವ್ಯವಸ್ಥೆಯನ್ನೂ ನೀವು ಮಾಡಿಲ್ಲ. ಸಾಧಾರಣ ಜನರಿಗೆ ನಿಮ್ಮ ಸರ್ಕಾರದಲ್ಲಿ ಗೌರವ ಇಲ್ಲದುತಾಗಿದೆ. ಹಿಂದೂಗಳನ್ನು ನಿಷ್ಪಕ್ಷಪಾತ ತೀರಾ ಕಡೆಗಣ್ಣಿನಿಂದ ನೋಡುತ್ತಿದ್ದೀರಿ. ಇವತ್ತು ಮುಸಲ್ಮಾನರು ಸತ್ತರೆ ಅವರ ಹೆಣವನ್ನು ಹೂಳಲು ಊರಿನ ಮಧ್ಯದಲ್ಲಿ ಜಾಗ ಕೊಟ್ಟಿದ್ದೀರಿ, ಕ್ರಿಶ್ಚಿಯನ್ನರು ಸತ್ತರೆ ಅವರ ಹೆಣವನ್ನು ಹೂಳಲು ಊರಿನ ಮಧ್ಯದಲ್ಲಿ ಜಾಗ ಕೊಟ್ಟಿದ್ದೀರಿ, ಅವರ ಚರ್ಚಿಗೆ ಜಾಗ ಕೊಟ್ಟಿದ್ದೀರಿ. ಆದರೆ ಒಬ್ಬ ಹಿಂದೂ ಸತ್ತರೆ ಅವನ ಹೆಣವನ್ನು ಹೂಳಲು ಊರಿನ ಮಧ್ಯದಲ್ಲಿ ಜಾಗವನ್ನು ಕೊಟ್ಟಿಲ್ಲ. ಆ ಹೆಣವನ್ನು ಹೂಳಬೇಕಾದರೆ ಸುಮಾರು ೪—೫ ಮೈಲಿ ಊರಿನಿಂದ ಆಚೆಗೆ ಹೊತ್ತುಕೊಂಡು ಹೋಗಬೇಕಾಗಿದೆ. ನೀವು ಇಲ್ಲಿ ಏನು ಹೇಳುತ್ತಿದ್ದೀರಿ ಎಂದರೆ ನಮ್ಮದು ಸೆಕ್ಯುಲರ್ ಸ್ಟೇಟ್ ನಮ್ಮದು ಸಮಾನ ಯ ದೇಶ ಎಂದು ಹೇಳುತ್ತಿದ್ದೀರಿ. ಆದರೆ ಜಾತಿಯ ಬೀಜವನ್ನು ಬಿತ್ತುತ್ತಿದ್ದೀರಿ. ಹಿಂದೂಗಳ ಧರ್ಮದ ಬಗ್ಗೆ, ಹಿಂದೂಗಳ ಸಂಸ್ಕೃತಿಯ ಬಗ್ಗೆ ಏತಕ್ಕೆ ಇಷ್ಟು ತಾತ್ಸಾರ? ನಾನು ಸವಾಲ್ ಹಾಕಿ ಹೇಳುತ್ತಿದ್ದೇನೆ. ನಾನು ಹಿಂದೂ ಧರ್ಮದ ವಿರೋಧಿ, ಹಿಂದೂ ಸಂಸ್ಕೃತಿಗೆ ವಿರೋಧಿ, ನಮ್ಮ ರಾಜ್ಯದಲ್ಲಿ ಹಿಂದೂ ದೇವಾಲಯಗಳು ಇರಬಾರದು, ಹಿಂದೂ ಪುಣ್ಯಮಾನ್ಯಗಳು ಇರಬಾರದು, ಎಂದು ನಿಮ್ಮ ಮ್ಯಾನಿಫೆಸ್ಟೋದಲ್ಲಿ ಹಾಕಿಕೊಂಡು ಚುನಾವಣೆಗೆ ನಿಂತು ಗೆದ್ದು ಬಂದರೆ

ಆಗ ನಿವ್ಮನ್ನು ಖಂಡಿತವಾಗಿಯೂ ಮೆಚ್ಚುತ್ತೇನೆ. ಸರ್ವ ಧರ್ಮಗಳನ್ನೂ ಉದ್ಧಾರ ಮಾಡತಕ್ಕ ಹಿಂದೂ ಧರ್ಮದ ಬಗ್ಗೆ ನೀವು ಏನನ್ನೂ ಮಾಡಿಲ್ಲ. ಎಲ್ಲಿ ನೋಡಿದರೂ ಕೋಟ್ಯಾಂತರ ರೂಪಾಯಿ ಗಳು ಲೂಟಿಯಾಗುತ್ತಿದೆ. ಅನೀತಿ, ಅಕ್ರಮಗಳು ನಡೆಯುತ್ತಿರುವುದನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಇದು ಸರಿಯಲ್ಲ. ಈ ದಿಸೆಯಲ್ಲಿ ಒಂದು ಸಮಗ್ರ ಶಾಸನವನ್ನು ಮಾಡಿ ಹಿಂದೂ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಬೇಕೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿ ಕೊಟ್ಟಿರುವಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ಘಾಡಿ (ಹಳಿಯಾಳ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತೇನೆ. ಈ ಖಾತೆಗೆ ೫೦–೬೦ ಕೋಟಿ ರೂಪಾಯಿ ಕೊಟ್ಟರೂ ಮಾನ್ಯ ಮಂತ್ರಿಯವರು ಖರ್ಚು ಮಾಡುವುದಕ್ಕೆ ಅಶಕ್ತರು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಸ್ವಾಮಿ, ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಲೇಸು'' ಎಂದು ನಮ್ಮ ಹಿರಿಯರು ಹೇಳಿದ್ದಾರೆ. ವ್ಯವಸಾಯ ವಿದ್ಯೆಯೇ ಎಲ್ಲಕ್ಕಿಂತ ಶ್ರೇಷ್ಟವಾದುದು. ಮೆಡಿಕಲ್ ವಿದ್ಯಾಭ್ಯಾಸ, ಟೆಕ್ನಿಕಲ್ ವಿದ್ಯಾಭ್ಯಾಸ, ಇಂಜಿನಿಯರಿಂಗ್ ವಿದ್ಯಾಭ್ಯಾಸ ಇವುಗಳು ಯಾವುವೂ ಕೂಡ ವ್ಯವಸಾಯ ವಿದ್ಯಾಭ್ಯಾಸದ ಸಮಕ್ಕೆ ಬರಲಾರವು. ಕಾರಣ ಕೃಷಿ ವ್ಯವಸ್ಥೆಯ ಮೇಲೆ ಇಡೀ ರಾಷ್ಟ್ರದ ಪ್ರಗತಿ ಅವಲಂಬಿಸಿದೆ. ನಮ್ಮ ದೇಶದಲ್ಲಿ ನಾನಾ ರೀತಿಯ ಉದ್ಯೋಗಗಳಿವೆ. ಇಲ್ಲಿ ಒಂದು ಮಾತನ್ನು ಹೇಳುವುದಾದರೆ ಒಕ್ಕಲುತನ ಶ್ರೇಷ್ಠ, ವ್ಯಾಪಾರ ಮಧ್ಯಮ, ಮತ್ತು ನೌಕರಿ ಕನಿಷ್ಟ ಎಂದು ಜನ ಹೇಳುತ್ತಾರೆ. ಆದರೆ ಇವತ್ತಿನ ರೈತ ಪರಿಸ್ಥಿತಿಯನ್ನು ನೋಡಿದರೆ, ಮತ್ತು ಆತನ ಕಷ್ಟ ವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನೌಕರಿಯೇ ಅತಿ ಶ್ರೇಷ್ಠ ಎನ್ನುವಂತಾಗಿದೆ. ಎಲ್ಲ ವರ್ಗದ ಜನರಿ ಗಿಂತಲೂ ಹೆಚ್ಚಾಗಿ ರೈತವರ್ಗದ ಶೋಷಣೆ ಬಹಳವಾಗಿ ನಡೆಯುತ್ತಿದೆ. ಅಷ್ಟೇ ಅಲ್ಲದೆ ರೈತ ಎಲ್ಲಿಗೇ ಹೋದರೂ ಅವನಿಗೆ ಮಾನ್ಯತೆ ಇಲ್ಲ, ಗೌರವ ಇಲ್ಲ. ಆತನನ್ನು ಪಶುವಿಗಿಂತ ಕಡೆಯಾಗಿ ಕಾಣುತ್ತಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ನಾವು ರೈತರನ್ನು ಸಹಾನುಭೂತಿಯಿಂದ ಕಾಣುತ್ತಿದ್ದೇವೆಂದು ತಾವು ಹೇಳುತ್ತಿದ್ದೀರಿ ಶೇಕಡ ೭೫ರಷ್ಟು ಪ್ರತಿನಿಧಿಗಳು ರೈತ ಮನೆತನದಿಂದ ಬಂದಿದ್ದೇವೆ. ಇದನ್ನು ನಾವು ಮರೆಯಬಾರದು. ಅವರ ಕಷ್ಟಗಳನ್ನು ನಾವು ಗಣನೆಗೆ ತೆಗೆದುಕೊಂಡು ಅವರಿಗೆ ಅನುಕೂಲ ಮಾಡುವುದನ್ನು ಕಲಿಯಬೇಕು. ಕೇವಲ ಲಿಪ್ಸ್ ಸಿಂಪತಿಯನ್ನು ರೈತರ ಬಗ್ಗೆ ತೋರಿಸುವುದು ಸರಿಯಲ್ಲ. ರೈತರ ಸುಧಾರಣೆ, ಅವರ ಉದ್ಧಾರ ಮೊದಲು ಆಗಬೇಕು. ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು. ಇವತ್ತು ನಮ್ಮ ದೇಶದಲ್ಲಿ ರೈತನಾಗಿ ಹುಟ್ಟಿರುವವನು ಹಿಂದಿನ ಜನ್ಮದಲ್ಲಿ ಯಾವುದೋ ಪಾಪ ಮಾಡಿದ್ದನೆಂದು ಹೇಳಬೇಕಾಗಿದೆ. ಅವನ ಕಷ್ಟವನ್ನು ನಾವು ಕಣ್ಣಿಂದ ನೋಡುವುದಕ್ಕಾಗುವುದಿಲ್ಲ. ಹಗಲು, ರಾತ್ರಿ, ಛಳಿ, ಮಳೆ, ಗಾಳಿ, ಬಿಸಿಲುಗಳೆನ್ನದೆ ಕೆಲಸ ಮಾಡುತ್ತಿದ್ದಾನೆ, ಇಷ್ಟು ಕಷ್ಟಪಟ್ಟು ಕೆಲಸ ಮಾಡಿದರೂ ಆತನ ಸಂಸಾರಕ್ಕೆ ಸಾಕಷ್ಟು ಬಟ್ಟೆ ಇಲ್ಲ, ಎರಡು ಹೊತ್ತು ಊಟಕ್ಕೆ ಗತಿ ಇಲ್ಲ, ಆರೆ ಹೊಟ್ಟೆ ತಿಂದು, ಮುರುಕು ಗುಡಿಸಲಿನಲ್ಲಿ ಜೀವನವನ್ನು ಕಳೆಯಬೇಕಾಗಿದೆ. ಹೀಗೆ ಎಲ್ಲ ಅನುಕೂಲಗಳಿಂದಲೂ ಅವನು ವಂಚಿತನಾಗಿದ್ದಾನೆ; ಮತ್ತು ಕಡೆಗಣಿಸಲ್ಪಟ್ಟಿದ್ದಾನೆ. ಇವತ್ತು ನೆರೆ ಹಾವಳಿ ಬಂತು ಅಂದರೆ ರೈತ ತೊಂದರೆಗೆ ಈಡಾಗುತ್ತಾನೆ, ಅನಂತರ ಸರ್ಕಾರ ಅವನಿಗೆ ಸಾಲ ಕೊಡುತ್ತದೆ. ಆದರೆ ಮತ್ತೆ ಆ ಸಾಲದಿಂದ ಅವನು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ''Karnataka farmer borns in debt, lives in debt and dies in debt''. ಆತ ಹುಟ್ಟುವುದೂ ಸಾಲದಲ್ಲಿ, ಜೀವನ ಮಾಡುವುದೂ ಸಾಲದಲ್ಲಿ ಮತ್ತು ಕಡೆಗೆ ಸಾಯುವುದೂ ಸಾಲದಲ್ಲಿ. ಇದು ರೈತನ ಪರಿಸ್ಥಿತಿ.

ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಶೇಕಡ ೮೦ ಭಾಗ ಜನ ರೈತರಾಗಿದ್ದಾರೆ. ರೈತ ನಮ್ಮ ದೇಶದ ಬೆನ್ನುಮೂಳೆ ಎಂದು ಎಲ್ಲ ಕಡೆಗಳಲ್ಲೂ ಹೇಳುತ್ತಿರುತ್ತೀರಿ. ಆದರೆ ನೀವು ಹಾಕತಕ್ಕ ತೆರಿಗೆ ಮತ್ತು ಕೊಡತಕ್ಕ ಹಿಂಸೆಯಿಂದ ಆ ಬಡ ರೈತನ ಬೆನ್ನುಮೂಳೆ ಸಂಪೂರ್ಣವಾಗಿ ಮುರಿದು ಹೋಗುತ್ತಿದೆ. ಅವನಿಗೆ ಈ ರೀತಿ ಹಿಂಸೆ ಕೊಡಬೇಡಿ. ಆತನ ಮೇಲೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುತ್ತಿದ್ದೀರಿ, ಇದು ಸರಿಯಲ್ಲ. ಅವನ ಮೇಲೆ ಅನುಕಂಪವನ್ನು ಸರ್ಕಾರದವರು ತೋರಿಸಬೇಕು. ಅವನು ಇನ್ನೂ ಹೆಚ್ಚು ಹೆಚ್ಚಾಗಿ ಕೃಷಿ ಉತ್ಪನ್ನ ಮಾಡಲು ಪ್ರೋತ್ಸಾಹ ಕೊಡಬೇಕು. ರೈತರ ಮನೆಗಳನ್ನು ಅಭ್ಯಾಸ ಮಾಡಲು ಗ್ರಾಮಸೇವಕರನ್ನು ಪ್ರತಿ ಒಂದು ಸಾವಿರ ಮನೆಗೆ ಒಬ್ಬರಂತೆ ನೇಮಕ ಮಾಡಿದ್ದೀರಿ. ಪ್ರತಿ ಯೊಬ್ಬ ರೈತನ ಮನೆಗೂ ಅವರು ಹೋಗಿ, ಅವರಿಗೆ ಎಷ್ಟು ಜಮೀನಿದೆ ? ಅದರ ಪೈಕಿ ಎಷ್ಟು

ಜಮೀನು ಸಾಗುವಳಿಯಾಗುತ್ತಿದೆ ? ಎಷ್ಟು ಉತ್ಪತ್ತಿ ಬರುತ್ತಿದೆ ? ಅವರ ಮನೆಯಲ್ಲಿ ಎಷ್ಟು ಜನ ಇದ್ದಾರೆ, ಇವರು ಬೆಳೆಯುವುದು ಆ ಸಂಸಾರಕ್ಕೆ ಸಾಕಾಗುತ್ತದೆಯೆ ? ಅಥವಾ ಹೆಚ್ಚಿಗೆ ಬೆಳೆದು ಏನಾದರೂ ಉಳಿತಾಯ ಮಾಡುತ್ತಾರೆಯೇ ? ಏನ್ನುವ ಅಂಶಗಳನ್ನು ತನಿಖೆ ಮಾಡಿಸುವ ಕೆಲಸ ಮಾಡಬೇಕು.

ಮಾನ್ಯ ಅಧ್ಯಕ್ಷರೆ, ರೈತನು ಬೆಳೆಯತಕ್ಕ ಪ್ರತಿಯೊಂದು ವಸ್ತುವಿನ ಬೆಲೆಯೂ ಬಹಳ ಕಡಿಮೆ ಇದೆ. ಆದರೆ ಆತ ಕೊಂಡುಕೊಳ್ಳತಕ್ಕ ಪ್ರತಿಯೊಂದು ವಸ್ತುಗಳ ಬೆಲೆಯೂ ಗಗನಕ್ಕೆ ಹೋಗಿದೆ. ಉದಾಹರಣೆಗೆ ಹೇಳುವುದಾದರೆ, ಸಕ್ಕರೆ, ಬಟ್ಟೆಣ, ಉಕ್ಕು, ಸಿಮೆಂಟ್, ಸೀಮೆ ಎಣ್ಣೆ ಬಟ್ಟೆ, ಇನ್ನೂ ಮುಂತಾದುವು. ಈಗ ನಾವು ರೈತರಿಗೆ ಇಂಪ್ರೂವ್ಡ್ ಸೀಡ್ಸ್‌ನ್ನು ಕೊಡಬೇಕೆಂದು ಪ್ರಯತ್ನಿಸುತ್ತಿರುವುದಾಗಿ ಕೇಳಿದ್ದೇನೆ.

೧೦–೦೦ ಎ. ಎಂ.

ಆದರೆ ಇವತ್ತು ರೈತ ಬತ್ತ ಬೆಳೆದರೆ ೧೦೦ ರೂಪಾಯಿಗೂ ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ, ಆದೇ ಅವನಿಗೆ ಬೇಕಾದ ವ್ಯವಸಾಯ ಸಲಕರಣೆಗಳ ಬೆಲೆ ಗಗನಕ್ಕೆ ಏರಿದೆ. ಒಂದು ಮಾಟೆ ಭತ್ತವನ್ನು ಬೆಳೆಯಲಿಕ್ಕೆ ೧೮೦ ರೂಪಾಯಿ ಆಗುತ್ತದೆ. ಇನ್ನು ಬಿತ್ತನೆ ಬೀಜ ಕೊಳ್ಳಲಿಕ್ಕೆ ಆರ್ಥಿಕವಾಗಿ ಅವನಿಗೆ ಯೋಗ್ಯತೆ ಇರುವುದಿಲ್ಲ. ಅದಕ್ಕೆ ಸರ್ಕಾರದವರು ಹೇಳಬಹುದು ಅವನಿಗೆ ಸಾಲ ಕೊಡುತ್ತೇವೆ ಎಂದು ಆದರೆ ಸಾಲ ಕೊಟ್ಟರೂ ಅದು ಅವನಿಗೆ ಭಾರ ಆಗುವುದಿಲ್ಲವೇ ? ಇದರಿಂದ ಯಾವರೀತಿ ಅವನಿಗೆ ಸರ್ಕಾರ ಸಹಾಯ ಮಾಡಿದಂತೆ ಆಗುತ್ತದೆಂದು ಕೇಳುತ್ತೇನೆ ಅದಕ್ಕೆ ನನ್ನ ಸೂಚನೆ ಏನು ಎಂದರೆ, ಯಾವ ಬಿತ್ತನೆ ಬೀಜ ವೆರೈಟಿ ಇದೆ ಅದನ್ನು ಸರ್ಕಾರದವತಿಯಿಂದ ಸಬ್ಸಿಡೈಸ್ ರೇಟಿನಲ್ಲಿ ಕೊಡಿ, ಜೊತೆಗೆ ಕೊಂಡು ಕೊಳ್ಳುವಾಗ ಅವನಿಗೆ ರೊಕ್ಕ ಕೊಡಿ. ಇನ್ನು ತಾಲ್ಲೂಕು ಮಟ್ಟದಲ್ಲಿ ಏನು ವ್ಯವಸಾಯೋತ್ಪನ್ನ ಸೊಸೈಟಿಗಳು ಇರುತ್ತವೆ, ಅವುಗಳಲ್ಲಿ ಅವನಿಗೆ ಬೇಕಾದ ಸಲಕರಣೆಗಳು ದೊರೆಯುತ್ತಿಲ್ಲ. ನಮ್ಮ ಕುಂಟಾಗೇ ಹೋಗಬೇಕು ಅಲ್ಲಿ ಸೀಡ್ ಫಾರಂ ಇದ್ದರೂ, ಸರಿಯಾದ ವ್ಯವಸ್ಥೆಯಿಲ್ಲ. ನಾನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಮೀಟಿಂಗ್‌ನಲ್ಲಿ ಎಷ್ಟು ಕೂಗಾಡಿದರೂ ಅದರ ಮೇಲೆ ಯಾವ ಪರಿಣಾಮ ಆಗಲಿಲ್ಲ. ಇತರ ಬೆಲೆಗಳು ಗಗನಕ್ಕೆ ಹೋಗಿವೆ. ಈ ರೀತಿ ಇರುವುದರಿಂದ ರೈತ ಬೆಳೆದ ಮಾಲಿಗೆ ಸರಿಯಾದ ಬೆಲೆ ಇಲ್ಲ. ಸಾಮಾನ್ಯವಾಗಿ ನಮ್ಮ ಕಾರವಾರ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವುದೇ ಭತ್ತ, ಇವತ್ತಿನ ದಿವಸ ಕಾಸ್ಟ್ ಆಫ್ ಅಗ್ರಿಕಲ್ಚರ್ ಏನಾಗಿದೆ, ಎಂದರೆ ಬೆಳೆದ ಮಾಲಿಗೆ ಬೆಲೆ ಇಲ್ಲ. ರೈತನಿಗೆ ಉಳಿಯುವುದು ಏನು ಗೊತ್ತೇ, ಅದು ಸಾಲ ? ಮಹಾರಾಷ್ಟ್ರ, ತಮಿಳುನಾಡು ಸರ್ಕಾರಗಳು ರೈತನಿಗೆ ಸೀಡ್ ಮನಿ ಸಾಲಗಳನ್ನು ಕೊಟ್ಟಿದ್ದರು ಅದನ್ನು ಮನ್ನಾ ಮಾಡಿದ್ದಾರೆ : ಆದರೆ ನಾನು ಹೇಳುವುದು ಈ ರೀತಿ ಅದನ್ನು ಮನ್ನಾ ಮಾಡಿದ್ದರಿಂದ ರೈತನಿಗೆ ಇದು ಶಾಶ್ವತ ಪರಿಹಾರವಲ್ಲ, ಎಲ್ಲಿಯವರೆಗೆ ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಮತ್ತು ಯೋಗ್ಯ ಬೆಲೆ ಸಿಗುವುದಿಲ್ಲ, ಅಲ್ಲಿಯವರೆಗೆ ರೈತರ ಉದ್ಧಾರವಾಗುವುದಿಲ್ಲವೆಂದು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಸಾಲವನ್ನು ಮನ್ನಾ ಮಾಡಿದರೂ ಅವನ ಆರ್ಥಿಕ ಪರಿಸ್ಥಿತಿ ಏನು ಸುಧಾರಿಸಿದಂತೆ ಆಗುವುದಿಲ್ಲ. ವ್ಯವಸಾಯ ಮಾಡಿ ರಾಗಿ ಮತ್ತು ಭತ್ತ ಬೆಳೆಸುತ್ತಾನೆ, ಅವನಿಗೆ ಯೋಗ್ಯ ಬೆಲೆ ಸಿಗಬೇಕು. ಕನಿಷ್ಠ ೧೨೦ ರೂಪಾಯಿ ಸಿಗಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ೫ ನಿಮಿಷಗಳಲ್ಲಿ ಮುಗಿಸಬೇಕು ಇನ್ನು ನನ್ನ ಹತ್ತಿರ ದೊಡ್ಡ ಪಟ್ಟಿ ಇದೆ, ನೀವು ಮಾತನಾಡಬಾರದು ಎಂದು ಹೇಳುವುದಿಲ್ಲ ? ಆದರೆ ಲಿಸ್ಟ್ ಏನು ಕೊಟ್ಟಿದ್ದಾರೆ ಅದು ದೊಡ್ಡದು ಇದೆ.

ಶ್ರೀ ವಿ.ಎಂ. ಫಾಡಿ.—ಮಾನ್ಯ ಅಧ್ಯಕ್ಷರೆ, ನಮ್ಮ ಹಳಿಯಾಳ ಭಾಗದಲ್ಲಿ ಸಾಮಾನ್ಯವಾಗಿ ಬರಗಾಲವೇ ಹೆಚ್ಚು, ಇನ್ನು ಕೆಲವು ಸಂದರ್ಭದಲ್ಲಿ ಚಾಸ್ತಿಯಾಗಿ ಪೈರು ಕೈಗೆ ಸಿಕ್ಕುವುದಿಲ್ಲ, ಇದು ಹೇಗಾಗಿದೆ ಎಂದರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆನ್ನುವಂತೆ ಆಗುತ್ತದೆ. ಅಕಾಲಿಕವಾಗಿ ಹೆಚ್ಚಾಗಿ ಮಳೆ ಬರುವುದರಿಂದ ಅವರ ಸ್ಥಿತಿ ಹೇಳತೀರದು. ಇನ್ನು ನಮ್ಮ ಧಾರವಾಡ ಮತ್ತು ಬೆಳಗಾಂ ಭಾಗದಲ್ಲಿ ಲಿಂಗನಮಕ್ಕಿ ಮತ್ತು ಕಾಳಿ ಯೋಜನೆಗಳು ತುಂಬಿರುವುದರಿಂದ, ಅಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿ ಕೈಗಾರಿಕಾ ಮೊಲೀಕರುಗಳಿಗೆ ಸಹಾಯವಾಗುತ್ತದೆ. ಹೊಟ್ಟೆ ತುಂಬಿದವರಿಗೆ

ಊಟ ಸಿಕ್ಕುವಂತೆ ಆಗುತ್ತದೆ. ಆದ್ದರಿಂದ ಯಾವ ಇಂಡಸ್ಟ್ರೀಸ್‌ಗಳು ಇವೆ ಅವರ ಮೇಲೆ ಯಾವು ದಾದರೂ ರೀತಿಯಲ್ಲಿ ಹಣ ವಸೂಲು ಮಾಡುವಂತೆ ಮಾಡಿ ಅದನ್ನು ನಮ್ಮ ರೈತರ ಉಪಯೋಗಕ್ಕೆ ಬರುವಂತೆ ಮಾಡಬೇಕು. ರೈತ ಕಂದಾಯ, ತೆರಿಗೆ, ಕೊಡಬೇಕು. ಆದುದರಿಂದ ಮುಂದಿನ ವ್ಯವಸಾಯಕ್ಕೆ ಬೇಕಾದ ಹಣವನ್ನು ಬಡ್ಡಿಯಿಲ್ಲದೆ ಸಾಲದರ ರೂಪದಲ್ಲಿ ಕೊಡಬೇಕು ಸಾಲವನ್ನು ನೇರವಾಗಿ ಸರ್ಕಾರದವರು ಕೊಡುವಂತೆ ಆಗಬೇಕು. ಉದಾಹರಣೆಗೆ ಸರ್ಕಾರಿ ನೌಕರರು ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ನೌಕರರು ಮತ್ತು ಕಾರ್ಮಿಕರಾದರೆ ಅವರು ಪೆನ್ ಡೌನ್ ಸ್ಟೈಕ್ ಮಾಡುತ್ತಾರೆ. ಅವರಿಗೆ ಹೆಚ್ಚಿನ ವೇತನ, ಬೋನಸ್ ಮುಂತಾದುವುಗಳನ್ನು ಕೊಡುತ್ತಾರೆ. ಈ ರೈತ ಸ್ಟೈಕ್ ಮಾಡುವುದಾದರೆ Plough down strike ಮಾಡಬೇಕು. ರೈತ ಸ್ಟೈಕ್ ಮಾಡಿದರೆ ಹೊಲದಲ್ಲಿ ಬೆಳೆ ಇರುವುದಿಲ್ಲ ಫಸಲು ಬೆಳೆಯುವುದಿಲ್ಲ ಇವನಿಗೆ. ನೀವು ಯಾವ ಬೋನಸ್ ಕೊಡುತ್ತೀರಿ ? ಅವನು ತೆಗೆದುಕೊಂಡ ಸಾಲ ಕೊಡದೆ ಹೋದರೆ ಅವನ ಮನೆಯನ್ನು ಅಥವಾ ಗುಡಿಸಲನ್ನು ಜಪ್ತಿ ಮಾಡಿ ಅವನು ಉಣ್ಣಲಿಕ್ಕೆ ಅಥವಾ ಕುಡಿಯಲಿಕ್ಕೆ ಇಟ್ಟುಕೊಂಡ ಪದಾರ್ಥಗಳನ್ನು ಹರಾಜು ಮಾಡುತ್ತಾರೆ ಅಷ್ಟೆ. ಇನ್ನು ಲ್ಯಾಂಡ್ ರೀ ಫಾರ್ಮ್ಸ್ ಬಗ್ಗೆ ಹೇಳುತ್ತೇನೆ, ಸ್ವಾಮಿ, ರೈತ ಕಾರ್ಮಿಕ ನೂರು ರೂಪಾಯಿಗಳನ್ನು ಕೊಟ್ಟರೆ, ಪಟ್ಟಾ ಕೊಡಬೇಕೆಂದು ಹೇಳುತ್ತಾರೆ. ಯಾವಾಗ ಅವನಿಗೆ ಆ ಭೂಮಿಗೆ ಬೆಲೆ ಸಿಕ್ಕದೆ ಇದ್ದರೆ, ಅವನು ಕಂತಿನಲ್ಲಿ ಕೊಡಬೇಕು ಎನ್ನುವುದನ್ನು ಮನ್ನಾ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರಾದ ರಾಮದೇವ್ ಮತ್ತು ಲಕ್ಷ್ಮೀಸಾಗರ್ ಪಟ್ಟಣಗಳಲ್ಲಿ ವಾಸಮಾಡುವವರ ಬಗ್ಗೆ, ಹೇಳಿದರು. ಆದರೆ ಪಟ್ಟಣಗಳಲ್ಲಿರುವವರು at the cost of Vill ge People they enjoy.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಮ್ಮ ಸ್ನೇಹಿತರಾದ ಘಾಡಿಯವರು ನಮ್ಮನ್ನು ಅರ್ಥ ಮಾಡಿಕೊಳ್ಳಲಿಲ್ಲ. ಜನರಲ್ ಡಿಸ್‌ಕಷನ್ ಸಮಯದಲ್ಲಿ, ನಾವು ಹೇಳಿದ್ದೇವೆ, ನಮ್ಮ ರಾಜ್ಯದಲ್ಲಿ ರೈತರಿಗೆ ಆಗುವ ತೊಂದರೆ ಮತ್ತು ಅನ್ಯಾಯ ಮತ್ತೆ ಯಾರಿಗೂ ಇಲ್ಲ. ಕಣ್ಣು ಮುಚ್ಚಿಕೊಂಡು ನಡೆಯುತ್ತಾ ಇದೆ. ಅವರು ಏನು ಸಲ್ಲಿಸಬೇಕಾದ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಹೇಳಿದ್ದೇವೆ. ನಿಮ್ಮಗಳಲ್ಲಿ ಯಾರೂ ಅದಕ್ಕೆ ಸಹಕಾರ ಕೊಡಲಿಲ್ಲ. ರೈತರ ಪರವಾಗಿ ಅವರಿಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಇದೆ.

ಶ್ರೀ ವಿ. ಎಂ. ಘಾಡಿ.—ರೈತರಿಗೆ ಯಾವರೀತಿ ಸೌಲತ್ತು ಕೊಟ್ಟಿದ್ದಾರೆ ? ಕರ್ನಾಟಕದ ನೌಕರರಿಗೂ ಬೇಕಾದಷ್ಟು ಸೌಲತ್ತುಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಹೇಳುವುದು ರೈತರ ಮಕ್ಕಳಿಗೆ ಅಡ್ಮಿನಿಷನ್ ಮತ್ತು ನೌಕರಿಗಳಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡುತ್ತಿಲ್ಲ. ಅದನ್ನು ಕಡ್ಡಾಯ ವಾಗಿ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಕನಿಷ್ಟ ಪಕ್ಷ ೫ ಪರ್ಸೆಂಟ್ ರಿಸರ್‌ವೇಷನ್ ಇಡಬೇಕು.

ಇನ್ನು ಲ್ಯಾಂಡ್ ರೀ ಫಾರ್ಮ್ಸ್ ಬಗ್ಗೆ ಹೇಳುವುದಾದರೆ ಹೈಕೋರ್ಟಿನಲ್ಲಿ ಎಷ್ಟೋ ರಿಟ್ ಪಿಟಿಷನ್‌ಗಳು ಪೆಂಡಿಂಗ್ ಇವೆ. ರಿಟ್ ಪಿಟಿಷನ್‌ಗಳು ನಿಕಾಲ್ ಆಗಿಲ್ಲ. ರೈತನ ವಿರುದ್ಧ ಮಾಲೀಕ ಕೋರ್ಟಿಗೆ ಹೋಗಿ ಇಂಜಕ್ಷನ್ ತಂದಿದ್ದಾನೆ. ಅವನಿಗೆ ನಾಲ್ಕಾಣೆ ಆದಾಯವಿಲ್ಲದೆ ಬೀದಿ ಭಿಕಾರಿಯಾಗಿದ್ದಾನೆ. ಈ ರಿಟ್ ಪಿಟಿಷನ್‌ಗಳು ಇನ್ನು ಎರಡು ಮೂರು ವರ್ಷಗಳಾದರೂ ನಿಕಾಲ್ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಹಳಿಯಾಳದಲ್ಲಿ ನಡೆದಂತಹ ಒಂದು ಉದಾಹರಣೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಅದು ಇವರು ರೆಕಾರ್ಡಡ್ ಟೆನೆಂಟ್ ಎಂದು, ಮಾರ್ಚ್ ತಿಂಗಳಲ್ಲಿ ಬೆಳೆಯನ್ನು ತೆಗೆಯುವಾಗ ಮಾಲೀಕ ಇವರಿಗೆ ತೊಂದರೆ ಕೊಡುತ್ತಾನೆ. ಆಗ ರೈತ ದೂರು ಕೊಟ್ಟರೆ ಸ್ಪಾಟ್ ಇನ್‌ಸ್ಪೆಕ್ಷನ್ ಕಂಡಕ್ಟ್ ಮಾಡಲಿಲ್ಲ ಎಂದು ಭೂಮಾಲೀಕ ಸ್ಟೇಟ್ ಮೆಂಟ್ ತೆಗೆದುಕೊಂಡಿಲ್ಲ ಹಾಗೆ ಹೀಗೆ ಎಂದು ಕಡೆಗೆ ಸರ್ಕಾರಕ್ಕೆ ಭೂಮಿಯನ್ನು ಕೊಡಬೇಕೆಂದು ತೀರ್ಮಾನ ಬರುತ್ತದೆ ಇದರ ಬಗ್ಗೆ ಒಂದು ಕೊಶ್ಚನ್ ಕೂಡ ಹಾಕಿದ್ದೇನೆ. ಸರ್ಕಾರದ ನೀತಿಯನ್ನು ಯಶಸ್ವಿಯಾಗಿ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಯನ್ನು ರಚನೆ ಮಾಡುವುದರಲ್ಲಿ ಅನ್ಯಾಯವಾಗಿದೆ. ಭೂಮಿಯ ವಿಚಾರ ಗೊತ್ತಿಲ್ಲದೆ ಇರುವವರನ್ನು ಹೊಟೇಲ್ ಮಾಲೀಕರು ಮುಂತಾದವರನ್ನು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಹಾಕಿದ್ದಾರೆ. ಅವರನ್ನು ತೆಗೆದು ಹಾಕಿ ಭೂಮಿಯ ವಿಚಾರವನ್ನು ತಿಳಿದುಕೊಂಡಿರು

ವವರನ್ನು ಯೋಗ್ಯರಾದವರನ್ನು ಈ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಹಾಕಬೇಕೆಂದು ನಾನು ಸರ್ಕಾರದಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಭೂ ಸುಧಾರಣಾ ಕಾಯಿದೆಗೆ ಸಂಬಂಧಪಟ್ಟ ಹಾಗೆ ಭೂ ಮಾಲೀಕರು ರಿಟ್ ಹಾಕುತ್ತಾರೆ. ಆಗ ಹೈಕೋರ್ಟಿನಿಂದ ಸ್ಟೇ ಆರ್ಡರ್ ಬರುತ್ತದೆ. ಅಂಥಾ ಸಂದರ್ಭದಲ್ಲಿ ಪೋಲೀಸ್ ಇಲಾಖೆಯವರು ಟೆನೆಂಟ್‌ಗಳಿಗೆ ಸಹಾಯ ಮಾಡುವುದಿಲ್ಲ. ಅವರೇನಿದ್ದರೂ ಭೂಮಾಲೀಕರಿಗೆ ಹೆಚ್ಚಿನ ಸಹಾಯ ಮಾಡುತ್ತಾರೆ. ಟೆನೆಂಟ್‌ಗಳಿಗೆ ಸಹಾಯ ಮಾಡುವುದಿಲ್ಲ. ಆದ್ದರಿಂದ ಪೋಲೀಸಿನವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಆದಷ್ಟು ಮಟ್ಟಿಗೆ ರೈತರಿಗೆ ಸಹಾಯ ಮಾಡಬೇಕು. ಅವರು ಕಾಯಿದೆಯನ್ನು ಅಪಾರ್ಥ ಮಾಡಿಕೊಂಡು ಸ್ಟೇ ಆರ್ಡರ್ ತೆಗೆದುಕೊಂಡು ಹೋಗಬಾರದು. ಟೆನೆಂಟ್‌ಗಳಿಗೆ ರಕ್ಷಣೆ ಕೊಡುವಂತೆ ಸರ್ಕಾರದವರು ಪೋಲೀಸಿನವರಿಗೆ ಸೂಚನೆ ಕೊಡಬೇಕು.

ಈಗ ಗ್ರಾಮಾಂತರ ಪ್ರದೇಶಗಳಲ್ಲಿ ತಹಶೀಲ್ದಾರರು ವಿಲೇಜ್ ಮ್ಯಾಪುಗಳನ್ನು ಮಾಡಿದ್ದಾರೆ. ಅದು ಒಂದು ಮೇಳೆ ರೈತರಿಗೆ ಬೇಕಾದರೆ ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಶ್ಯಾನುಭೋಗರ ಮನೆಯಲ್ಲಿ ಉಗ್ರಾಣಿಗಳು ಎಂದು ಕೆಲಸ ಮಾಡಿಕೊಂಡು ಇದ್ದಾರೆ. ಅವರಿಗೆ ಕೇವಲ ೧೦೦ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಅದು ಅವರಿಗೆ ಏನೇನೂ ಸಾಕಾಗುವುದಿಲ್ಲ. ಆದ್ದರಿಂದ ಅವರಿಗೆ ಕನಿಷ್ಟ ಪಕ್ಷ ೨೦೦ ರೂಪಾಯಿಗಳ ಸಂಬಳವಾದರೂ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ನನಗೆ ಮಾತನಾಡಬೇಕೆಂಬ ಚಟ ಇರಲಿಲ್ಲ. ನಿನ್ನೆ ಕೆಲವು ಮಾನ್ಯ ಸದಸ್ಯರು ಮಾತನಾಡಿದರು. ಅವರು ಮಾತನಾಡಿದ ಮೇಲೆ ನನಗೂ ಸಹ ಮಾತನಾಡೋಣ ಎಂದು ಅನಿಸಿತು ಶ್ರೀಮಾನ್ ಬಂಗಾರಪ್ಪನವರು ರೆವಿನ್ಯೂ ಇಲಾಖೆ ಮತ್ತು ವ್ಯವಸಾಯ ಇಲಾಖೆ ಎರಡು ಖಾತೆಯನ್ನೂ ಪಹಿಸಿಕೊಂಡಿರತಕ್ಕದ್ದು ಬಹಳ ವಿಶೇಷವಾಗಿರತಕ್ಕ ವಿಷಯವಾಗಿದೆ. ಈ ಸಂದರ್ಭದಲ್ಲಿ ನಾನು ಶ್ರೀಮಾನ್ ಗುಂಡೂರಾವ್ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಏತಕ್ಕೆಂದರೆ ರಾಜ್ಯದಲ್ಲಾಗಲೀ ಕೇಂದ್ರದಲ್ಲಾಗಲೀ ರೈತರಿಗೆ ಅನುಕೂಲವಾಗಬೇಕು ಎಂದರೆ ವ್ಯವಸಾಯ ಮತ್ತು ರೆವಿನ್ಯೂ ಖಾತೆ ಒಬ್ಬ ಮಂತ್ರಿಗಳಲ್ಲೇ ಇರಬೇಕು. ರೆವಿನ್ಯೂ ಖಾತೆ ಏನು ಕೆಲಸ ಮಾಡುತ್ತಿದೆ ಅದು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟದ್ದು. ಆದ್ದರಿಂದ ರೆವಿನ್ಯೂ ಇಲಾಖೆಯ ಕೆಲಸವನ್ನು ಮಾಡಿ ಆದರ ಒಂದು ಬಲಿತಾಂಶದಿಂದ ವ್ಯವಸಾಯ ಇಲಾಖೆಯಲ್ಲಿ ರೈತರಿಗೆ ಸಂಬಂಧಪಟ್ಟ ಹಾಗೆ ಏನು ಕೆಲಸವನ್ನು ಮಾಡಬೇಕೋ ಆದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಸರ್ಕಾರದವರು ಭೂಹೀನರಿಗೆ ಜಮೀನು ಕೊಡುತ್ತಾರೆ. ಹೀಗೆ ಒಬ್ಬ ರೈತನಿಗೆ ೪ ಎಕರೆ ಜಮೀನು ಕೊಟ್ಟರೆ ಅದನ್ನು ಅವನು ಉಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವನಿಗೆ ಎತ್ತು ಕೊಡಬೇಕು, ಮತ್ತು ಅವನು ಆ ಭೂಮಿಯನ್ನು ಆಬಾದು ಮಾಡುವುದಕ್ಕೆ ಬೇಕಾದ ಸೌಲಭ್ಯವನ್ನು ಒದಗಿಸಬೇಕು, ಹಣ ಸಹಾಯವನ್ನು ಒದಗಿಸಬೇಕು. ಆ ರೀತಿ ಮಾಡಿದರೆ ಅವನು ಆ ಜಮೀನನ್ನು ಆಬಾದು ಮಾಡಿಕೊಂಡು ಬೆಳೆಯನ್ನು ಬೆಳೆದು ಸಂಸಾರವನ್ನು ಸಾಗಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಾನೆ. ಮತ್ತು ಆ ಜಮೀನಿನಲ್ಲಿ ಉತ್ತಮವಾದ ಬೆಳೆಯನ್ನೂ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ರೆವಿನ್ಯೂ ಇಲಾಖೆ ಏನು ಕೆಲಸ ಮಾಡುತ್ತದೆ ಅದರಿಂದ ವ್ಯವಸಾಯ ಇಲಾಖೆಗೆ ಬಹಳ ಸಹಾಯವಾಗುತ್ತದೆ ಎಂದು ಅನಿಸುತ್ತದೆ. ಈಗ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಬಂಗಾರಪ್ಪನವರು ಭೂಮಿಯ ವಿಚಾರದಲ್ಲಿ ನಂಬಿಕೆ ಇರತಕ್ಕವರು. ಮತ್ತು ನಮ್ಮ ಆಪಾರ ಸ್ನೇಹಿತರೂ ಹಾಗೂ ದೇಶದಲ್ಲಿ ಮಹಾನ್ ವ್ಯಕ್ತಿ ಎನಿಸಿಕೊಂಡಿದ್ದ ಶ್ರೀಮಾನ್ ಗೋಪಾಲಗೌಡರು ಏಷ್ಯರು. ಶ್ರೀಮಾನ್ ಗೋಪಾಲಗೌಡರು ಭೂ ಚಳುವಳಿಯನ್ನು ಪ್ರಾರಂಭ ಮಾಡಿದಾಗ ನಾವೆಲ್ಲರೂ ಕವಿಯನ್ನು ನಿಮಿರಿಸಿ ಕೇಳುತ್ತಿದ್ದೆವು ಕಣ್ಣನ್ನು ತೆರೆದು ನೋಡುತ್ತಿದ್ದೆವು. ಶ್ರೀಮಾನ್ ಗೋಪಾಲಗೌಡರು ಮತ್ತು ಅವರ ಏಷ್ಯರು ಭೂ ಸುಧಾರಣೆಯ ಬಗ್ಗೆ ಚಳುವಳಿ ಮಾಡಿದಾಗ ಶಿವಮೊಗ್ಗದ ಜನರು ಒಂದು ದೊಡ್ಡ ಚಳುವಳಿ ಮಾಡಿದರು. ಆಗ ನಮ್ಮ ದೇಶಕ್ಕೆ, ಕರ್ನಾಟಕ ರಾಜ್ಯಕ್ಕೆ ಒಂದು ಅರಿವು ಆಗಿದೆ. ಆ ಒಂದು ಕಾರಣ ಇರಬೇಕೋ ಏನೋ ಶ್ರೀಮಾನ್ ಬಂಗಾರಪ್ಪನವರು ಈಗ ರೆವಿನ್ಯೂ ಮಂತ್ರಿಗಳಾಗಿದ್ದಾರೆ. ಭೂಸುಧಾರಣೆ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ಕೊಡಬೇಕು ಎಂದು ಆಗಿದೆ. ಇದನ್ನು ಇವರು ಮಾಡುತ್ತಾರೆ. ಎಂದು ಅಂದುಕೊಂಡಿದ್ದೆ. ಇದನ್ನು ಈಗ ೬ ತಿಂಗಳಿಂದ ನಾನು ಸೂಕ್ಷ್ಮವಾಗಿ ನೋಡುತ್ತಿದ್ದೇನೆ.

ಹಿಂದೆ ನಾವು ಈ ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ತಂದಿದ್ದೆವು, ಅದನ್ನು ಇವರು ಮುಂದುವರಿಸಿ ಕೊಂಡು ಹೋಗುತ್ತಾರೆ ಎಂದುಕೊಂಡಿದ್ದೆ. ಆದರೆ ಇವರು ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ಕೊಟ್ಟಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತ ನಾಡುವಾಗ ಇದರ ಬಗ್ಗೆ ಹೇಳಿದ್ದೇನೆ. ಆಗ ಇವರು ಹೇಳಿದರು, ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ಕೊಡುವುದಕ್ಕೆ ನಾವು ಇನ್ನೂ ಪ್ರಾರಂಭ ಮಾಡಿಲ್ಲ, ನಾವು ಈಗ ತಾನೆ ಅಧಿಕಾರಕ್ಕೆ ಬಂದಿದ್ದೇವೆ ಎಂದು ಹೇಳಿದರು. ಈಗಾಗಲೇ ಇವರು ಅಧಿಕಾರಕ್ಕೆ ಒಂದು ೬ ತಿಂಗಳಾಯಿತು, ಯಾವುದೂ ಮಾಡಿಲ್ಲ. ಈ ೬ ತಿಂಗಳ ಕಾಲದಲ್ಲಿ ಕೆಲವು ಜಿಲ್ಲೆಗಳಲ್ಲಿ ಲ್ಯಾಂಡ್ ಟ್ರಿಬ್ಯುನಲ್ ರಚನೆ ಮಾಡಿದ್ದಾರೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಟ್ರಿಬ್ಯುನಲ್‌ಗಳನ್ನು ರಚನೆ ಮಾಡಿಲ್ಲ. ಯಾವಾಗ ಅವುಗಳನ್ನು ರಚನೆ ಮಾಡುತ್ತೀರೋ ಮಾಡು ಕೊಂಡು ಹೋಗಿ ಈಗಾಗಲೇ ಯಾವ ಜಿಲ್ಲೆಗಳಲ್ಲಿ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ರಚನೆ ಮಾಡಿ ಅವುಗಳಿಗೆ ಸದಸ್ಯರನ್ನೇನು ನಾಮಕರಣ ಮಾಡಿದ್ದಾರೆ ಅವರುಗಳಲ್ಲಿ ಶ್ರದ್ಧಾಭಕ್ತಿ ಇರತಕ್ಕವರನ್ನು ಒಬ್ಬರನ್ನಾದರೂ ಹಾಕಿದ್ದಾರೆಯೇ ಎಂದು ಪ್ರಶ್ನೆಯನ್ನು ಹಾಕಿದರೆ ಶ್ರೀಮಾನ್ ಬಂಗಾರಪ್ಪನವರೇ ಹೇಳಿದ್ದಾರೆ, ಶ್ರದ್ಧಾ ಭಕ್ತಿ ಇರತಕ್ಕವರು ಒಬ್ಬರೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾವ್ ಅವರು ಹೇಳಿದ್ದಾರೆ ಲ್ಯಾಂಡ್ ಟ್ರಿಬ್ಯುನಲ್ ಮಾಡತಕ್ಕ ಅಧಿಕಾರ ನನ್ನದು ಎಂದು. ನಾನು ಶ್ರೀಮಾನ್ ಬಂಗಾರಪ್ಪನವರನ್ನು ಕೇಳಿ ಟ್ರಿಬ್ಯುನಲ್‌ಗಳನ್ನು ರಚನೆ ಮಾಡಿದ್ದೇನೆ, ಅವು ಗಳನ್ನು ಸರಿಯಾಗಿ ಮಾಡಿದ್ದೇನೆ ಎಂದು ಅವರು ಹೇಳಿದ್ದಾರೆ. ಇವರಿಬ್ಬರೂ ಮಾಡಿರತಕ್ಕದ್ದು ನನ್ನ ಅನುಭವಕ್ಕೆ ಬಂದಿದೆ ಈ ಟ್ರಿಬ್ಯುನಲ್‌ಗಳು ಏನು ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ, ಆ ಕೆಲಸಕಾರ್ಯಗಳು ಸಮರ್ಪಕವಾಗಿಲ್ಲ. ತೃಪ್ತಿಕರವಾಗಿಲ್ಲ. ಇದರ ಬಗ್ಗೆ ಹಲವಾರು ದೂರು ಗಳು ಬಿಜಾಪುರ ಜಿಲ್ಲೆಯಿಂದ ಹಲವಾರು ದೂರುಗಳು ಇನ್ನೂ ಕೆಲವು ಕಡೆಗಳಿಂದ ಬಂದಿದೆ. ಬಾಗಲ ಕೋಟೆಯಲ್ಲಿ ಕೆಲವರು ಬಡವರು ೨೦–೩೦ ವರ್ಷಗಳಿಂದ ಸಾಗು ಮಾಡುತ್ತಿದ್ದ ಜಮೀನನ್ನು ಬೇರೆಯ ವರಿಗೆ ಕೊಡುವುದಕ್ಕೋಸ್ಕರ ಇಷ್ಟು ಹಣ ಕೊಡಿ ಎಂದು ಟ್ರಿಬ್ಯುನಲ್ ಮೆಂಬರು ಕೇಳಿದ್ದಾರೆ. ಇಂಥಾ ಕೇಸುಗಳು ಬಹಳ ಇವೆ. ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಪತ್ರ ಬರೆದು ತಿಳಿಸುತ್ತೇನೆ. ಭೂಸುಧಾರಣೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ದೃಷ್ಟಿಯಿಂದ ಶ್ರದ್ಧಾಭಕ್ತಿ ಇರುವ ಸದಸ್ಯರುಗಳನ್ನು ಲ್ಯಾಂಡ್ ಟ್ರಿಬ್ಯುನಲ್‌ಗಳಿಗೆ ನೇಮಕ ಮಾಡಿ ಅವರು ಒಂದು ನೀತಿಯ ಆಧಾರದ ಮೇಲೆ ಈ ಕಾರ್ಯ ಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಸಮಾಜ ವಾದದಲ್ಲಿ ವಿಶ್ವಾಸ ಇಟ್ಟ ಇಟ್ಟು ಸಮಾಜವಾದದಲ್ಲಿ ನಂಬಿಕೆ ಇರತಕ್ಕ ಜನ ಅದನ್ನು ಕಾರ್ಯರೂಪಕ್ಕೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಇವರು ವಿಫಲರಾಗಿದ್ದಾರೆ. ಸಮಾಜವಾದವನ್ನು ಗಂಟೆಗಟ್ಟಲೆ ಮಾತನಾಡಿ ಪುಸ್ತಕ ಬರೆಯುತ್ತಾರೆ. ಸಮಾಜವಾದದ ಬಗ್ಗೆ ಇರುವ ಪುಸ್ತಕಗಳನ್ನು ಓದು ತ್ತಾರೆ. ಬಾಯಲ್ಲಿ ಸಮಾಜವಾದವನ್ನು ಹೇಳುತ್ತಾರೆ. ಯಾವುದಾದರೂ ಒಂದು ಕಾರ್ಯಕ್ರಮವನ್ನು ಸಮಾಜದಲ್ಲಿ ಜಾರಿಗೆ ತರಬೇಕಾದರೆ ಅದಕ್ಕೆ ಒಂದು ರೂಪವನ್ನು ಕೊಟ್ಟು ಅದಕ್ಕೆ ಒಂದು ಚಿತ್ರವನ್ನು ನಿರ್ಮಾಣ ಮಾಡಿ ಅದನ್ನು ಕಾರ್ಯಗತ ಮಾಡಬೇಕು ಎಂದಾಗ ಎಲ್ಲಾ ಕಡೆ ಅದರಲ್ಲಿ ಸೋತು ಹೋಗಿ ದ್ದಾರೆ. ಇವರು ನಿಷ್ಪ್ರಯೋಜಕರು ಎಂದು ನಮಗೆ ಗೊತ್ತಾಗಿದೆ. ಆದರೆ ಶ್ರೀಮಾನ್ ಬಂಗಾರಪ್ಪ ನವರು ನಿಷ್ಪ್ರಯೋಜಕರಾಗುತ್ತಾರೆ ಎಂದು ನಾನು ಹೇಳುವುದಕ್ಕೆ ತಯಾರು ಇಲ್ಲ.

ಅವರು ಅದಕ್ಕೋಸ್ಕರವಾಗಿ ಕೆಲಸ ಮಾಡಿದ್ದಾರೆ. ಅವರು ಸಮತಾವಾದ ಸಮಾಜದಲ್ಲಿ ನಂಬಿಕೆಯುಳ್ಳ ವರಾಗಿದ್ದಾರೆ. ಆದರೆ ಇದನ್ನು ಕಾರ್ಯಗತಮಾಡುವಾಗ ನಿಷ್ಪೆಯಿಂದ ಮಾಡಬೇಕು ಎಂದು ಹೇಳು ತ್ತೇನೆ. ಈ ಒಂದು ಭೂಸುಧಾರಣೆ ಕಾನೂನನ್ನು ಜಾರಿ ಮಾಡುವಾಗ ತಮಗೆ ಹೇಳಬೇಕಾದರೆ ಮುಖ್ಯಾಲುಭಾಗ ಅಧಿಕಾರಿಗಳಿಗೆ ಶ್ರದ್ಧೆ ಇಲ್ಲ, ಭಕ್ತಿ ಇಲ್ಲ, ಬಡವರಲ್ಲಿ ಕನಿಕರ ಇಲ್ಲ, ಬಡವರ ಗೋಳು ಅವರಿಗೆ ಗೊತ್ತೇಇಲ್ಲ ಎಂದು ಹೇಳುತ್ತೇನೆ. ಸಮಾಜದಲ್ಲಿ ಹೀಗೆ ವಿತಕ್ಕೆ ಬೆಳೆದುಕೊಂಡು ಬಂದಿದೆ ಎಂದರೆ ಈ ಅಧಿಕಾರಿಗಳಿಗೆ ತಿಂಗಳಿಗೊಮ್ಮೆ ಸಾಕಷ್ಟು ಸಂಬಳ ಸಿಕ್ಕುವುದರಿಂದ ಅವರಿಗೆ ಈ ಬಡವರು ಯಾವರೀತಿ ಜೀವನ ಮಾಡುತ್ತಾರೆ. ಅವರ ಗೋಳು ಹೇಗಿದೆ, ಅವರ ಕಷ್ಟ ಹೇಗಿದೆ ಇವರ ಬಗ್ಗೆ ಗಮನ ಕೊಡುವುದಕ್ಕೆ, ಇವರ ಬಗ್ಗೆ ಮನಸ್ಸು ಮಾಡುವುದಕ್ಕೆ ಹೋಗುವುದಿಲ್ಲ. ಅಧಿಕಾರಿಗಳು ಭೋಗದಿಂದ ಜೀವನ ಮಾಡುತ್ತಾರೆ, ಅದರಿಂದ ಗೊತ್ತಾಗುವುದಿಲ್ಲ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಾನು ಹಿಂದೆ ಕಂದಾಯ ಮಂತ್ರಿಯಾಗಿದ್ದಾಗ ಎಷ್ಟೋ ಕಡೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಆವಾಗ ನಾನು ನೋಡಿದ್ದೇನೆ. ಅವರು ಈ ಬಡವರ ಬಗ್ಗೆ ಸಾಕಷ್ಟು ಲಕ್ಷ್ಯ ಕೊಡುತ್ತಾ ಇಲ್ಲ, ತಮ್ಮ ಭೋಗ

ಜೀವನದ ಕಡೆಯೇ ಹೆಚ್ಚು ಗಮನ ಕೊಡುತ್ತಾರೆ. ಈ ಬಡವರ ಬಗ್ಗೆ ಅವರು ಏನು ಕರ್ತವ್ಯ ನಿರ್ವಹಣೆ ಮಾಡಬೇಕೋ ಅದನ್ನು ಸರಿಯಾಗಿ ಮಾಡುತ್ತಾ ಇಲ್ಲ. ನಾನು ಯಾವ ಯಾವ ಭಾಗದಲ್ಲಿ ಇನ್‌ಸ್ಪೆಕ್ಷನ್ ಮಾಡಿದ್ದೇನೋ ಅಲ್ಲೆಲ್ಲಾ ಈ ಭೂಸಂಧಾರಣೆ ಹೇಗೆ, ಯಾವರೀತಿಯಾಗಿ ನಡೆದಿದೆ ಎನ್ನುವ ಬಗ್ಗೆ ಪರಿಶೀಲನೆ ಮಾಡಿ, ಮತ್ತು ನಾನು ತನಿಖೆ ಮಾಡತಕ್ಕಂಥಾದ್ದರ ಬಗ್ಗೆ ಬರೆದು ಬಂದಿದ್ದೇನೆ. ಡೆಪ್ಯೂಟಿ ಕಮೀಷನರ್ ಆಫೀಸಿನಲ್ಲಿ, ಡಿವಿಷನಲ್ ಕಮೀಷನರ್ ಆಫೀಸಿನಲ್ಲಿ ಎಲ್ಲಾ ಕಡೆಯೂ ರೆಕಾರ್ಡ್ ಆಗಿದೆ. ಅದನ್ನೇನಾದರೂ ತಾವು ನೋಡಿದ್ದೀರಾ ? ನಾನೂ ಎಲ್ಲವನ್ನೂ ಪರಿಶೀಲನೆ ಮಾಡಿ ಬರೆದಿದ್ದೇನೆ, ಅಲ್ಲದೆ ನಾನೂ ಸ್ವತಃ ನೋಡಿರುವುದರಿಂದ ತಮಗೆ ಹೇಳುತ್ತಿದ್ದೇನೆ, ಯಾರು ಡೆಪ್ಯೂಟಿ ಕಮೀಷನರಾಗಿದ್ದಾರೆ ಅವರೆಲ್ಲಾ ಬುದ್ಧಿವಂತರು ಎಂದು ತಾವು ತಿಳಿದುಕೊಳ್ಳಬೇಕು, ಕೆಲವರು ಬುದ್ಧಿವಂತರು ಇದ್ದಾರೆ ಎಲ್ಲರನ್ನೂ ಹೇಳುವುದಿಲ್ಲ, ಅವರು ಇದನ್ನು ಸರಿಯಾಗಿ ಮಾಡದೇ ಹೋದರೆ ನಮ್ಮ ಕರ್ತವ್ಯ ಚ್ಯುತಿ ಮಾಡಿದಂತಾಗುತ್ತದೆ. ಕೆಲವು ಜನರು ಬುದ್ಧಿವಂತರಾದ ಜನರು ಏನು ಇದ್ದಾರೆ ಅವರು ಸ್ವಂತ ಶ್ರಮ ವಹಿಸಿ ಬುದ್ಧಿವಂತರಾಗಿದ್ದಾರೆ. ಅಂಥವರು ಪ್ರಯತ್ನ ಮಾಡಿದರೆ ದೇಶದಲ್ಲಿ ನಿಜವಾಗಿಯೂ ಕೂಡ ಕಲ್ಯಾಣವಾಗುತ್ತದೆ. ಅಂಥವರು ಈ ಒಂದು ಕಾರ್ಯಕ್ರಮವನ್ನು ಅಲ್ಲಲ್ಲಿ ಜಾರಿಗೆ ತರುತ್ತಿದ್ದಾರೆ. ಕೆಲವು ಡೆಪ್ಯೂಟಿ ಕಮೀಷನರು ಚಿಕ್ಕವರು ಇರಬಹುದು, ಸಾಕಷ್ಟು ಓದಿಲ್ಲದೇ ಇರಬಹುದು, ಸಾಕಷ್ಟು ಅನುಭವ ಇಲ್ಲದೇ ಇರಬಹುದು, ಮತ್ತು ವಿಶೇಷವಾಗಿ ಹೈಕೋರ್ಟಿನಲ್ಲಿರುವ ಜರ್ನಲ್ಸ್‌ನ್ನು ನೋಡಿದರೆ ಅವರು ಯಾವರೀತಿಯಾಗಿ ಕೇಸಸ್‌ಗಳನ್ನು ತೀರ್ಮಾನ ಮಾಡಿದ್ದಾರೆ, ಅದನ್ನು ನೋಡಿಲ್ಲದೇ ಇರಬಹುದು ಅದರಿಂದ ಅವರಿಗೆ ಇದರ ಬಗ್ಗೆ ಸರಿಯಾಗಿ ಗೊತ್ತಿಲ್ಲದೇ ಇರಬಹುದು. ಅವರು ಏತಕ್ಕಾಗಿ ಆ ಜರ್ನಲ್ಸ್‌ನ್ನು ಓದಿ ತಿಳಿದುಕೊಳ್ಳುವುದಿಲ್ಲವೋ ನನಗೆ ಗೊತ್ತಾಗುವುದಿಲ್ಲ. ಅದುದರಿಂದ ತಾವು ಈಗಲಾದರೂ ಕೂಡ ಅವರಿಗೆಲ್ಲರಿಗೂ ಆ ಜರ್ನಲ್ಸ್‌ನ್ನು ಓದಿಸಿಕೊಡುವ ಹಾಗೆ ಮಾಡಬೇಕು. ಆದುದರಿಂದ ಈ ಅಧಿಕಾರಿಗಳು ಬಹಳ ಬುದ್ಧಿವಂತರು ಎಂದು ತಾವು ತಿಳಿದುಕೊಳ್ಳಬೇಕು. ಅವರು ಹೀಗೆಯೇ ಇದ್ದರೆ ಇನ್ನು ಮುಂದಾದರೂ ಈ ಪದ್ಧತಿಯನ್ನೇ ಮುಂದುವರಿಸುವುದಕ್ಕೆ ಹೋಗಬೇಡಿ ಅವರ ಮೇಲೆ ಸಾಕಷ್ಟು ಒಂದು ಲಗಾಮು ಹಾಕಿಕೊಂಡು ಕೆಲಸ ತೆಗೆದುಕೊಳ್ಳಿ. ತೀರ್ಮಾನವಾಗಲೇ ಬೇಕು. ಇಂತಿಷ್ಟು ಜನರಿಗೆ ಉಪಕಾರವಾಗಲೇ ಬೇಕು ಅಂತ ಒಂದು ನಿಗದಿ ಮಾಡಿ ಮತ್ತು ಇದರ ಜೊತೆಗೆ ತಾವು ಇಂತಿಷ್ಟು ಕೇಸುಗಳನ್ನು ತೀರ್ಮಾನ ಮಾಡಲೇಬೇಕು ಅಂತ ಒಂದು ನಿರ್ಭಂದ ಹಾಕಿ ಅವರಿಗೆ ಕೊಟ್ಟರೆ ಇದರಿಂದ ಅನೇಕ ಬಡಜನರಿಗೆ ಅನುಕೂಲವಾಗುತ್ತದೆ ನನಗಾದರೂ ಅನಿಸುತ್ತದೆ. ಇದರಲ್ಲಿ ಇನ್ನೊಂದು ಮುಖ್ಯವಾದ ವಿಷಯ ಹೇಳಬೇಕಾದರೆ ಈ ಭೂಸುಧಾರಣೆಯನ್ನು ಜಾರಿಗೆ ಕೊಡುವಾಗ ಅಧಿಕಾರಿಗಳು ಬಹಳ ನ್ಯೂನತೆಗಳನ್ನು ಮಾಡಿದ್ದಾರೆ. ಅದರಲ್ಲೂ ಕೂಡ ಅಸಿಸ್ಟೆಂಟ್ ಕಮೀಷನರು ರಾಜಕೀಯ ಮಾಡಿದ್ದಾರೆ, ಕೆಲವು ಅಧಿಕಾರಿಗಳು ಜಮೀನ್ದಾರರೊಂದಿಗೆ ಷಾಮೀಲಾಗಿ ಹಣವಸೂಲ್ಮಾಡಿ ಭೂಸುಧಾರಣೆ ಕಾನೂನನ್ನು ಮೂಲೋತ್ಪಾಟನೆ ಮಾಡಿದ್ದಾರೆ. ಇದಕ್ಕೆ ಸಾಕಷ್ಟು ಸಾಕ್ಷಿ ಇವೆ. ಇವೆಲ್ಲವನ್ನೂ ಕೂಡ ನಾನು ನೋಡಿ, ಅದರಲ್ಲಿ ಏನಾಗಿದೆ ಅನ್ನುವುದನ್ನು ನೋಡಿ ಇನ್‌ಸ್ಪೆಕ್ಷನ್ ಮಾಡಿದ್ದೇನೆ. ಯಾವ ಯಾವ ಅಧಿಕಾರಿಗಳು ಏನೇನು ಮಾಡಿದ್ದಾರೆ ಅನ್ನುವುದನ್ನು ಸ್ಪಷ್ಟವಾಗಿ ರೆಕಾರ್ಡ್‌ನಲ್ಲಿ ಬರೆದಿಟ್ಟಿದ್ದೇನೆ. ಅದುದರಿಂದ ಈ ಅಸಿಸ್ಟೆಂಟ್ ಕಮೀಷನರ್ ಏನು ಇದ್ದಾರೆ ಅವರು ಜವಾಬ್ದಾರಿ ಮನುಷ್ಯರು ಎಂದು ತಿಳಿದಕೊಂಡರೆ ಅದು ತಪ್ಪು. ನಾನು ಈ ಬಗ್ಗೆ ಎಲ್ಲರನ್ನೂ ಹೇಳುತ್ತಿಲ್ಲಾ, ಕೆಲವರು ಹಾಗೆ ಇದ್ದಾರೆ, ಕೆಲವರು ಈ ರೀತಿಯಾಗಿ ಬೇಜವಾಬ್ದಾರಿಯಿಂದ ವರ್ತನೆ ಮಾಡತಕ್ಕಂಥಾದ್ದನ್ನು ನೋಡಿ ನಾನು ಸಂಕಟಪಟ್ಟಿದ್ದೇನೆ. ಇನ್ನು ಭೂಸುಧಾರಣೆ ಕಾನೂನು ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಎಂ. ಪಿ. ಎಸ್. ರಾಜನ್ ರವರು ಲ್ಯಾಂಡ್ ರಿಫಾರಂಸ್ ಅಪ್ಲೈಸರ್ ಅಂತ ಪಾಮ್ಡೆಟ್ಟಿವು. ಅವರು ಒಂದು ಸಣ್ಣ ಹೊತ್ತಿಗೆಯನ್ನು ಬರೆದಿದ್ದಾರೆ. ಅದರಲ್ಲಿ ಅವರು ಬರೆದಿರುವ ಒಂದೆರಡು ಮಾತುಗಳನ್ನು ತಮ್ಮ ಮುಂದೆ ಓದುತ್ತೇನೆ. ಅದನ್ನು ನಾವು ತಿಳಿದುಕೊಂಡರೆ ದೇಶಕ್ಕೂ ಅನುಕೂಲವಾಗುತ್ತದೆ. ಜನಗಳಿಗೂ ಅನುಕೂಲವಾಗುತ್ತದೆ, ಎಂದು ನಾನು ತಿಳಿದುಕೊಂಡಿದ್ದೇನೆ. ಆ ಪುಸ್ತಕದಲ್ಲಿ ಈರೀತಿ ಇದೆ. ಅದನ್ನು ಓದುತ್ತೇನೆ ಅದರಲ್ಲಿ ಏನು ಇದೆ ಎಂದರೆ ಈ ರೀತಿ ಇದೆ.

> "According to a World Bank document, "Land Reform involves intervention in the prevailing pattern of land ownership, control and usage in order to change the

structure on holdings, improve land productivity and broaden the distribution of benefits''. The intervention envisaged here is by the State. Continuing, the document points out : ''Land Reforms by its very context, as interlinked political, economic and social dimensions which in turn have significant implications for development''. Social description of this context given in the document has utilised such broad and universally-valid formulations that it is relevant to quote it here. The description runs thus : ''Man's relationship of land, and patterns of land holding and land use, are shaped by interactions of a complex of fource-climatic, economic, cultural, religious and political. In Eastern Afric, for instance, physical conditions in the temperate areas are suited to sedentary agriculture whereas more tropical and arid areas are better suited to shifting cultivation or lives tock hording. As a result, different systems of land management and patterns of holdings have emerged in adjacent ones. Similarly, laws and customs governing inheritance have an effect on the distribution of land. Where land is inherited by the oldest heir and not subdivided, the pattern of holdings is less fragmented than in societies where the custom is to divide holding equally among all he rs. In addition, many socio-economic factors affect customs of usufruct, traditions of crop-sharing and other arrangements surrounding land-use in varying situations''.

ಈ ಭೂಸುಧಾರಣೆ ಕಾನೂನು ನಮ್ಮ ದೇಶಕ್ಕೆ ಬದಲಾದಂಥಾ ಪರಿಸ್ಥಿತಿಗೆ ಬಹಳ ಅನುಕೂಲವಾಗುತ್ತದೆ. ನಮಗೆ ಇದೇ ಬುನಾದಿ. ನಮ್ಮ ಸಮಾಜದಲ್ಲಿ ನಮ್ಮ ಸಣ್ಣ ರೈತರು ಅಂಗೈ ಅಗಲ ಜಮೀನು ಏನು ಇಟ್ಟುಕೊಂಡಿದ್ದಾರೆ ಅದನ್ನೆ ಅವರು ಆರ್ಥಿಕವಾಗಿ ಸಾಮಾಜಿಕವಾಗಿ ಬಳಸಿಕೊಳ್ಳುವುದರಿಂದ ನಾವು ಅವರ ಕಡೆಗೆ ಹೆಚ್ಚು ಗಮನಕೊಡುವುದು ಸೂಕ್ತ. ನಾನು ಅದನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ ಈ ಭೂಸುಧಾರಣೆ ಕಾನೂನನ್ನು ಜಾರಿಗೆ ತರುವಾಗ ತಾವು ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಏನು ವಿಷಯ ಎಂದರೆ ಚಾಚೂ ತಪ್ಪದೆ ಆ ಅಧಿಕಾರಿ ಕೆಲಸ ಮಾಡಬೇಕು ಮತ್ತು ಲ್ಯಾಂಡ್ ಟ್ರಿಬ್ಯೂನಲ್ ಮೆಂಬರ್ಸ್ ಯಾವ ರೀತಿಯಾಗಿ ಇದರಲ್ಲಿ ಕೆಲಸ ಮಾಡುತ್ತಾನೆ ಎನ್ನುವುದನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡಿ ಕೆಲಸ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಹೋದ ಸಾರಿ ನಾನು ಸರ್ಕಾರಲ್ಲಿದ್ದಾಗ ಎಷ್ಟು ಅಪ್ಲಿಕೇಷನ್ ಇದ್ದುವು ಅನ್ನುವುದನ್ನು ಅಂಕಿಸಂಖ್ಯೆಗಳೊಡನೆ ಹೇಳುವುದಕ್ಕೆ ಇಷ್ಟಪಡುತ್ತೇನೆ. Total Number of applications filed by the tenants is 7,54,259, involving total area of 41,22,279 ಇದರಲ್ಲಿ ತೀರ್ಮಾನಮಾಡಿರುವುದು, Disposal of applications involving an area of 4,12,401 acres.

೧೦-೩೦ ಎ. ಎಂ.

ಇಲ್ಲಿಯವರೆಗೆ ಗೇಣಿದಾರರಿಗೆ ೨,೫೪,೮೮೨ ಎಕರೆ ಜಮೀನು ಹೋಗಿದೆ. ಈ ಭೂಸುಧಾರಣಾ ಕಾನೂನಿನ ಪ್ರಕಾರ ಹೆಚ್ಚುವರಿ ಭೂಮಿ ಇರುವವರು ಡಿಕ್ಲರೇಷನ್ ಕೊಡಬೇಕಾಗಿತ್ತು. ಆದರೆ ಕೆಲವರು ಏನು ಮಾಡಿದ್ದಾರೆಂದರೆ, ಈ ಕಾಯಿದೆಯನ್ನೇ ಮುರಿಯಲು ಹೊರಟ್ಟಿದ್ದಾರೆ. ಕೆಲವರ ಸಹಾಯ

ದಿಂದ ತಮ್ಮಲ್ಲಿರುವ ಹೆಚ್ಚುವರಿ ಜಮೀನನ್ನು ತಮ್ಮಲ್ಲಿಯೇ ಇಟ್ಟುಕೊಂಡಿದ್ದಾರೆ. ಇಂತಹವರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಈ ಹೆಚ್ಚುವರಿ ಜಮೀನಿನ ಬಗ್ಗೆ ೧,೪೫೫,೭೭೫ ಅಪ್ಲಿಕೇಷನ್‌ಗಳು ಇವೆ. ಅಂದರೆ ಇದರ ಲೆಕ್ಕದಲ್ಲಿ ಬರತಕ್ಕಂಥ ಜಮೀನು ೭೩,೭೩. ೧೮೩ ಎಕರೆಗಳು. ಇದರಲ್ಲಿ ಡಿಸ್‌ಪೋಸ್ ಮಾಡಿರುವುದು ೭೩,೪೭೬ ಅಪ್ಲಿಕೇಷನ್‌ಗಳು. ಒಟ್ಟಿನಲ್ಲಿ ಹೇಳಬೇಕೆಂದರೆ ಹೆಚ್ಚುವರಿ ಜಮೀನು ಇರುವವರೆಲ್ಲಾ ಡಿಕ್ಲರೇಷನ್ ಕೊಟ್ಟಿಲ್ಲ. ನಾನು ಬಿಜಾಪುರ, ರಾಯಚೂರು, ಬೀದರ, ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದಾಗ ಇದು ನನ್ನ ಗಮನಕ್ಕೆ ಬಂದಿದೆ. ಆದಕಾರಣ ಸರ್ಕಾರದ ವರು ಈ ಪ್ರಕರಣವನ್ನು ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಅಧಿಕಾರಿಗಳ ಜೊತೆಯಲ್ಲಿ ಷಾಮೀಲಾಗಿ ಜಮೀನಿನ ಮಾಲೀಕರು ತಮ್ಮ ನೆಂಟರಿಷ್ಟರ ಹೆಸರಿನಲ್ಲಿಯೆ ಜಮೀನನ್ನು ಉಳಿಸಿಕೊಂಡಿದ್ದಾರೆ. ಮತ್ತು ಎಷ್ಟೋ ಪ್ರಕರಣಗಳಲ್ಲಿ ಭೂನ್ಯಾಯಮಂಡಲಿಗಳಲ್ಲಿ ಕೇಸನ್ನು ಭೂಮಾಲೀಕರ ಕಡೆಗೇ ತಿರ್ಮಾನ ಮಾಡಿದ್ದಾರೆ. ಬೀದರ್ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ I have seen the Order. They have written the Order in one word, *ie.*, 'No' and in some order 'Yes'. This is the Order written by the Officer. They have not written more than this. I have really seen this Officer. He has come to the conclusion there were weae no surplus lands although there were surplus lands.. .....ಈ ಕಾರಣದಿಂದಲೇ ಭೂಸುಧಾರಣಾ ಮಸೂದೆಗೆ ಒಂದು ತಿದ್ದುಪಡಿಯನ್ನು ತಂದು ಡಿಕ್ಲರೇಷನ್ ಮಾಡಿಕೊಳ್ಳುವವರಿಗೆ ಮತ್ತೆ ಒಂದು ವರ್ಷದ ಅವಧಿಯನ್ನೂ ಕೊಟ್ಟಾಗ ಯಾರು ಹೆಚ್ಚುವರಿ ಭೂಮಿಯ ಬಗ್ಗೆ ಡಿಕ್ಲರೇಷನ್ ಕೊಟ್ಟಿದ್ದಾರೆ, ಅದನ್ನು ಪುನಃ ರಿವ್ಯೂ ಮಾಡಬೇಕು ಮತ್ತು ನಿಜವಾದಂಥ ಚಿತ್ರವನ್ನು ಗಣನೆಗೆ ತೆಗೆದುಕೊಂಡು, ಭೂಮಾಲೀಕರ ಪರವಾಗಿ ಏನಾದರು ತೀರ್ಮಾನವಾಗಿದ್ದರೆ, ಅದನ್ನು ರದ್ದು ಮಾಡಬಹುದೆಂದು ತಿಳಿಸಿದಾಗ, ಈ ಒಂದು ಕಾನೂನು ಪ್ರಕಾರ ಕೆಲವು ಪ್ರಕರಣಗಳಲ್ಲಿ ಆದಂಥ ತೀರ್ಮಾನವನ್ನು ರದ್ದು ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಅವಧಿಯನ್ನು ಇನ್ನೂ ಒಂದು ವರ್ಷ ಕಾಲ ವಿಸ್ತರಣೆ ಮಾಡುವುದು ಒಳ್ಳೆಯದು. ಏಕೆಂದರೆ, ಇನ್ನೂ ಕೆಲವರು ಡಿಕ್ಲರೇಷನ್ ಕೊಡದೆ ಜಮೀನನ್ನು ತಮ್ಮ ನೆಂಟರ ಹೆಸರಿನಲ್ಲಿ ಇಟ್ಟುಕೊಂಡಿದ್ದಾರೆ. ಇಂತಹವರು ಡಿಕ್ಲರೇಷನ್ ಕೊಡಲು ಅವಧಿಯನ್ನು ಮತ್ತೆ ವಿಸ್ತರಣೆ ಮಾಡುವುದು ಒಳ್ಳೆಯದು. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ, ಪಸೀಲಿಬಾಬಿಗೆ ಒಳಗಾಗದೆ.....

ಶ್ರೀ ಎಸ್. ಬಂಗಾರಪ್ಪ.—ನನ್ನನ್ನು ನೋಡಿದರೆ ತಮಗೆ ಯಾವ ರೀತಿ ಅನಿಸುತ್ತದೆ ಎಂಬುದನ್ನು ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ತಾವು ಯಾರ ಪ್ರಭಾವಕ್ಕೂ ಒಳಗಾಗದಿದ್ದರೆ ಇದರ ಬಗ್ಗೆ ತಾವು ಮತ್ತೆ ತಿದ್ದುಪಡಿ ತಂದು ಮತ್ತೆ ಡಿಕ್ಲರೇಷನ್ ಕೊಡಲು ಪುನಃ ಅವಕಾಶ ಮಾಡಿಕೊಡಬೇಕಾಗಿತ್ತು. ಆದರೆ ತಾವು ಸುಮ್ಮನಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ನಾನು ಸುಮ್ಮನಿದ್ದೇನೆಂದರೆ, ಪಸೀಲಿಬಾಬಿಗೆ ಒಳಗಾಗಿದ್ದೇನೆಂದು ಅರ್ಥವೇ ?

ಶ್ರೀ ಬಿ. ಬಸವಲಿಂಗಪ್ಪ.—ನಾವು ಈ ಭೂಸುಧಾರಣಾ ಕಾನೂನನ್ನು ಒಂದು ಉದಾತ್ತ ತತ್ವಗಳನ್ನು ಆಧಾರವಾಗಿ ಇಟ್ಟುಕೊಂಡು ಮತ್ತು ಒಂದು ಒಳ್ಳೆಯ ಧ್ಯೇಯೋದ್ದೇಶ ಇಟ್ಟುಕೊಂಡು ತಂದಿದ್ದೇವೆ. ಆದಕಾರಣ ಈಗ ಯಾರು ಯಾರನ್ನು ಭೂಸುಧಾರಣಾ ಮಂಡಲಿಗಳಲ್ಲಿ ಸದಸ್ಯರನ್ನಾಗಿ ನೇಮಕ ಮಾಡಿದ್ದೀರಿ, ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ತಾವು ನೋಡಿಕೊಳ್ಳಿ. ಯಾರಾದರೂ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆಂದು ತಿಳಿದುಬಂದರೆ, ಅವರು ಯಾವ ಪಕ್ಷದವರೇ ಆಗಿರಲಿ, ಮೊದಲು ಕಿತ್ತು ಹಾಕಿ. ಮತ್ತು ಈ ಕೆಲಸ ಮಾಡಲು ಒಳ್ಳೆಯ ಅನುಭವ ಹೊಂದಿರುವವರು ಯಾವ ಪಕ್ಷದಲ್ಲೇ ಇರಲಿ, ಅಂತಹವರನ್ನು ನೋಡಿ ಆಲ್ಲಿಗೆ ಹಾಕಿ ಎಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ನೀವು ಈ ಕಡೆಗೆ ಬನ್ನಿ. ನಿಮಂಗೇ ಈ ಕೆಲಸವನ್ನು ಮಾಡಿಸುತ್ತೇನೆ.

SRI S. BANGARAPPA.—An offer has already been made by the Hon'ble Chief Minister. It is for the Hon'ble Member Sri Basavalingappa to accept the offer and complete the contract. I do not come in the way.

ಶ್ರೀ ಆರ್. ಗುಂಡೂರಾವ್.—ಇಷ್ಟು ಹೊತ್ತು ನಾನು ಅವರ ಮಾತನ್ನು ಕೇಳಿದೆ. ಯಾರು ಯಾರು ಏನೇನು ಮಾಡಿದ್ದಾರೆ, ದಗಲಿಬಾಜಿ ಕೆಲಸ ಏನೇನಂ ಆಗಿದೆ ಎಂಬುದೆಲ್ಲಾ ಅವರಿಗೆ ಗೊತ್ತು. ಎಲ್ಲ ವಿಚಾರಗಳನ್ನು ಅವರು ತಿಳಿದುಕೊಂಡಿದ್ದಾರೆ. ಅದರ ಪ್ರಕಾರ ಇನ್ನೂ ಸ್ವಲ್ಪ ಕೆಲಸ ಏನಾದರೂ ಉಳಿದುಕೊಂಡಿದ್ದರೆ, ಅದನ್ನೆಲ್ಲಾ ಈ ಕಡೆಗೆ ಬಂದು ಪೂರ್ತಿ ಮಾಡಿ ಎಂದು ನಾನಂ ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ಅವರು ಈ ಕಡೆಗೆ ಬಂದು ಈ ಇಲಾಖೆಗೆ ಸಂಬಂಧಪಟ್ಟಂತೆ ಉಳದಿರುವಂತಹ ಕೆಲಸಗಳನ್ನು ಮುಗಿಸಲು ಒಪ್ಪಿಗೆ ಕೊಟ್ಟರೆ, ಮತ್ತು ಅವರು ಆ ಒಂದು ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾದರೆ, ಅದಕ್ಕೆ ನಾನು ಅಡ್ಡಿ ಬರುವುದಿಲ್ಲವೆಂದು ಹೇಳುತ್ತೇನೆ.

SRI A. LAKSHMI SAGAR.—There is no time to loss for Mr Basavalingappa to accept the offer. made.

ಶ್ರೀ ಬಿ. ಬಸವಲಿಂಗಪ್ಪ.—ಈಗ ಭೂ ಹಂಚಿಕೆಯ ಕೆಲಸ ಸ್ಥಗಿತವಾಗಿದೆ. ಯಾರು ಯಾರು ಬಡವರಿದ್ದಾರೆ. ಅಂತಹವರ ಬಗ್ಗೆ ಆದಷ್ಟು ನಿಗಾ ಕೊಡಬೇಕಾಗುತ್ತದೆ. ಯಾರು ಯಾರು ಬಡವರಾಗಿರುತ್ತಾರೆ, ಅಂತಹವರೇನಾದರು ಒಂದು ಎಕರೆ ಇಲ್ಲವೇ ಎರಡು ಎಕರೆ ಸರ್ಕಾರದ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದರೆ, ಅಂತಹ ಜಮೀನನ್ನು ಅವರಿಗೇ ಖಾಯಂ ಮಾಡಬೇಕೆಂದು ೧೯೭೭ ನೇ ಇಸವಿಯಲ್ಲಿ ಪ್ರಯತ್ನ ಮಾಡಿದರೂ ಸಹ ಆ ಒಂದು ಕೆಲವು ಕೆಲಸ ಕಾರಣಗಳಿಂದ ಆಗಲಿಲ್ಲ. ಈ ಬಗರ್ ಹುಕುಂ ಸಾಗುವಳಿಯನ್ನು ಕೇವಲ ಬಡವರು ಮಾತ್ರ ಮಾಡುತ್ತಿಲ್ಲ. ಕಾಫಿ-ಪ್ಲಾಂಟೇಷನ್ ಇರುವವರು ಮತ್ತು ಒಳ್ಳೆಯ ಸ್ಥಿತಿವಂತರು ಸಹ ಬಗರ್-ಹುಕುಂ ಸಾಗುವಳಿ ಮಾಡತ್ತಿದ್ದಾರೆ. ಇಂತಹವರು ಚಿಕ್ಕಮಗಳೂರು ಹಾಸನ ಹಾಗೂ ಕೂರ್ಗು ಜಿಲ್ಲೆಗಳಲ್ಲಿದ್ದಾರೆ. ಸುಮಾರು ೨೦ ಸಾವಿರ ಎಕರೆ ಗಳಷ್ಟು ಸರ್ಕಾರದ ಜಮೀನನ್ನು ಈ ರೀತಿ ಕೆಲವರು ಬಗರ್-ಹುಕುಂ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ, ಪುನಃ ಈ ಬಗ್ಗೆ ಎರಡನೇ ವರದಿಯನ್ನು ಕೊಟ್ಟಿದ್ದಾರೆ. ಸರ್ವೆ ಡಿಪಾರ್ಟ್‌ಮೆಂಟ್‌ನವರು ಇದನ್ನು ಆಳತೆ ಮಾಡಿ ಎಷ್ಟು ಎಕರೆಯಷ್ಟು ಪ್ರದೇಶಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಎಂಬ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. ಅಲ್ಲಿ ಯಾರ್ಯಾರು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆಯೋ ಅಂತಹವರ ಬಗ್ಗೆ ಏನು ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡ ಬೇಕು. ಈ ಬಗ್ಗೆ ಮಾನ್ಯ ಗುಂಡೂರಾಯರು ಏನು ಮಾಡುತ್ತಾರೆಯೋ ಗೊತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಆ ಕೆಲಸವನ್ನು ಯಾರ ಕೈಯಲ್ಲೂ ಮುಂದುಂವರಿಸುವುದಕ್ಕೆ ಆಗಲಿಲ್ಲ ಎಂಬುದು ನಮಗೂ ನಿಮಗೂ ಗೊತ್ತಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ ಅದನ್ನು ಕೊನೆಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಬಗರ್ ಹುಕುಂ ಸಾಗುವಳಿ ಜಮೀನನ್ನು ದೊಡ್ಡ ದೊಡ್ಡ ಜಮೀನು ದಾರರಿಗೆ ಕೊಡುವುದಕ್ಕಾಗುವುದಿಲ್ಲ. ಚಿಕ್ಕವರು ಯಾರಿದ್ದಾರೆ, ೨-೩ ಎಕರೆ ಹೊಂದಿರತಕ್ಕಂಥವರು ಅವರಿಗೆ ಅದನ್ನು ಕೊಡುವುದು ಒಳ್ಳೆಯದು. ನಾವು ಹಿಂದೆ ೨-೩ ಎಕರೆ ಭೂಮಿ ಯಾರಿಗೆ ಇದೆ ಅಂತಹವರಿಗೆ ಕೊಟ್ಟಿದ್ದೇವೆ. ಆದರೆ ಬಹಳಷ್ಟು ಜಮೀನು ಇದ್ದರೂ ಕೂಡ ಬಲವಂತರಾದವರು ಕೆಲವರು ಏನು ಮಾಡಿದ್ದಾರೆ ಎಂದರೆ ಅತಿಕ್ರಮ ಪ್ರವೇಶ ಮಾಡಿ ಕಾಫಿ ಪ್ಲಾಂಟೇಷನ್ ಮಾಡಿದ್ದಾರೆ, ಅವರನ್ನು ಅಲ್ಲಿಂದ ಹೊರಗೆ ಓಡಿಸತಕ್ಕಂಥಾದ್ದು ಅವಶ್ಯವಿದೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಈ ಕೆಲಸವನ್ನು ಕೂಡಲೇ ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಗುಂಡೂರಾಯರು ಈ ದಿಕ್ಕಿನಲ್ಲಿ ಮುಂದೆ ಮುಂದೆ ಹೋಗಿ ಯಾರ್ಯಾರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಅಂತಹವರೆಲ್ಲರನ್ನೂ ಹೊರಗೆ ಹಾಕಿ ಈ ರೀತಿ ಆಗುವುದನ್ನು ಅಂತ್ಯಗೊಳಿಸುವುದಕ್ಕೆ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನು ಹಿಂದೆ ರೆವೆನ್ಯೂ ಖಾತೆಯನ್ನು ವಹಿಸಿಕೊಂಡಿದ್ದಾಗ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ಯೋಜನೆಗಳನ್ನು ಪ್ರಾರಂಭ ಮಾಡಿದ್ದೆ. ಅದೆಲ್ಲವನ್ನೂ ಮಾನ್ಯ

ಬಂಗಾರಪ್ಪನವರು ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಗಂಗಾಧರ್‌ರವರು ಆಗಲೇ ಮಾತನಾಡುತ್ತಾ ಈ ಜಮಾಬಂದಿ ವಿಷಯವಾಗಿ ಹೇಳಿದ್ದಾರೆ. ಅದನ್ನು ನಾವು ಬಿಂದೆ ಬಹಳ ಕಷ್ಟಪಟ್ಟು ತಯಾರು ಮಾಡಿದ್ದೇವೆ. ಈ ಬಗ್ಗೆ ಅಧಿಕಾರಿಗಳು ಯಾವರೀತಿ ಡೆವೆಲಪ್‌ಮೆಂಟ್ ಆಕ್ಟಿವಿಟೀಸ್ ತೆಗೆದುಕೊಳ್ಳಬೇಕು, ಪ್ರತಿ ತಿಂಗಳಲ್ಲಿ ಅದನ್ನು ಹೇಗೆ ಮಾಡಬೇಕು. ರೆವೆನ್ಯೂ ಡಾಕ್ಯೂಮೆಂಟ್ ಯಾವರೀತಿ ಇಡಬೇಕು, ಅಧಿಕಾರಿಗಳು ಯಾವ ರೀತಿ ಕೆಲಸ ಮಾಡಬೇಕು– ಎಂಬ ಬಗ್ಗೆ ಜಮಾಬಂದಿ ತಯಾರು ಮಾಡಿ ಕೆಲಸ ಪ್ರಾರಂಭ ಮಾಡಿದ್ದೇವೆ. ಮಾನ್ಯ ಬಂಗಾರಪ್ಪನವರು ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ಕೊಡುವುದಕ್ಕೆ ಸಾಹಸ ಮಾಡಿ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಬೇಕಾಗಿತ್ತು, ನಾನು ಹೇಳಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ನನ್ನ ಹೆಸರು ಮೊದಲು ಇತ್ತು. ೧೫ ಜನರು ಇಲ್ಲಿ ಮಾತನಾಡಿದ್ದರೂ ಕೂಡ ನನ್ನ ಹೆಸರು ಇನ್ನೂ ಬರಲಿಲ್ಲ ನನಗೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು.—ಲಿಸ್ಟ್ ಪ್ರಕಾರ ನಾನು ಮಾನ್ಯ ಸದಸ್ಯರುಗಳನ್ನು ಕರೆಯುತ್ತಾ ಹೋಗುತ್ತಿದ್ದೇನೆ. ಆದ್ದರಿಂದ ಎಲ್ಲರಿಗಿಂತ ಮೊದಲು ನಿಮ್ಮನ್ನು ಕರೆಯುವುದಕ್ಕಾಗುವುದಿಲ್ಲ.

re:-Police Firng in Srinivasapur Town

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಯವರು ಈಗ ಸಭೆಗೆ ಬಂದಿದ್ದಾರೆ. ಅವರು ಉತ್ತರ ಕೊಡುತ್ತಾರೆ. ತಮ್ಮ ಅಪ್ಪಣೆ ಪಡೆದು ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆ ದಿವಸ ಶ್ರೀನಿವಾಸಪುರ ಟೌನ್‌ನಲ್ಲಿ ನಡೆದಂಥ ದುರ್ಘಟನೆಯಲ್ಲಿ ಪೋಲೀಸರು ಗುಂಡು ಹಾರಿಸಿ ಐದು ಜನರನ್ನು ಆಹುತಿ ತೆಗೆದು ಕೊಂಡಿದ್ದಾರೆ. ಈಗ ಅಲ್ಲಿ ಶಾಂತ ವಾತಾವರಣ ಇದೆಯೆಂದು ಹೇಳುತ್ತಾರೆ, ಆದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಅಲ್ಲಿ ಬಹಳ ಪ್ರಕ್ಷುಬ್ಧವಾದ ವಾತಾವರಣ ಇದೆಯೆಂದು. ತಿಳಿದು ಬಂದಿದೆ. ಇದರ ಬಗ್ಗೆ ಸರ್ಕಾದ ಪರವಾಗಿ ಹೇಳಿಕೆಯನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

SRI GUNDU RAO.Hon'ble (Chief Mi ister): I would like to read the following statement:

A lorry belonging to the Gowardhanlal and Co., Belgaum met with an accident due to tyre burst at Srinivaspur Town, Kolar District on 15-7-1980. One Lakshman alias B' eema, the driver of the lorry also belonging to Belgaum died in the accident. The post-mortem on the body was held on 16-7-80. The concerned people in Belgaum were informed about the incident On 18-7-80 the father of the deceased came to Srinivasapur to claim the body. The Police Sub-Inspector wanted to hand over the body to him. At this stage some Local people led by one Venkata Reddy appear to have intervened and insisted that the body could be handed over only when the owner of the lorry came to Srinivasapur and paid adequate compensation to the father of the deceased.

2. On 18-7-1980 a procession of about 500 persons consisting of drivers and others was taken out protesting against the disposal of the dead body unless adequate compensation was paid to the parents of the deceased by the lorry owners, The mob shouted slogans